ಅಪರಂಜಿ

ಫೆಬ್ರುವರಿ

1994

ತಿಳಿನಗೆಯ ಕಾರಂಜಿ



* ಪ್ರಕಾಶ್
* ಎಂ. ಶಿವಕುಮಾರ್
* ಸೀ. ಆರ್. ಸತ್ಯ
* ಕೆ. ಎಸ್. ಶ್ರೀಕಂಠಯ್ಯ
* ಹೆಚ್. ಗವಿಸಿದ್ದಯ್ಯ
* ಶಾಂತಾರಘು
* ನಂದಿನಿ ಕಾಪಡಿ
* ವೈ. ಎಸ್. ಕೃಷ್ಣಮೂರ್ತಿ
* ರಾಮು
* ಕುಮುದಾ ಪುರುಷೋತ್ತಮ್
* ಎಂ. ಟಿ. ಉಪಾಧ್ಯೆ

ಬಿಡಿ ಪ್ರತಿ : 2 ರೂ. 50 ಪೈ.



ಈ ಸಂಚಿಕೆಯಲ್ಲಿ

ಗೌರವ ಸಲಹೆಗಾರರು :

ಶ್ರೀ ಅ. ರಾ. ಸೇ.

ಶ್ರೀ ಶೇಷಗಿರಿ

ಸಂಪಾದಕ :

ಶಿವಕುಮಾರ್

ಚಂದಾ ವಿವರ :

ಬಿಡಿ ಪ್ರತಿ :

2ರೂ. 50 ಪೈ.

ವಾರ್ಷಿಕ ಚಂದಾ

25 ರೂ.

ಆಜೀವ ಚಂದಾ :

250 ರೂ.

ವಿಳಾಸ :

ಅಪರಂಜಿ ಕಾರ್ಯಾಲಯ
63, 6ನೆಯ ಮುಖ್ಯ ರಸ್ತೆ
ಮಲ್ಲೇಶ್ವರಂ
ಬೆಂಗಳೂರು 560 003

ಕೆಲಸದ ವೇಳೆ :
ಬೆಳಗ್ಗೆ 8ರಿಂದ
10ಗಂಟೆಯವರೆಗೆ

ಮುದ್ರಣ : ಇಂಪ್ರೆಷನ್ಸ್, ಮಲ್ಲೇಶ್ವರಂ, ಬೆಂಗಳೂರು - 560 003

ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ ೧೧ ಫೆಬ್ರವರಿ ೧೯೯೪ ಸಂಚಿಕೆ ೫

ಯಾವನನ್ನು ಒಳ್ಳೆಯ ಅಥವಾ ಕೆಟ್ಟ ನಡತೆಯವನೆಂದಾಗಲೀ, ಸಜ್ಜನನೆಂದಾಗಲೀ ದುಷ್ಟನೆಂದಾಗಲೀ, ಯಾರಿಗೂ ಅರಿತುಕೊಳ್ಳಲು ಬರುವುದಿಲ್ಲವೋ ಅಂತಹವನು ಬ್ರಹ್ಮವನ್ನು ತಿಳಿದವನು.

—ಅಜ್ಞಾತ ಶ್ರುತಿ

ಆತ್ಮಜ್ಞಾನಿಯು ಮೂಢನಂತೆ, ಕುರುಡನಂತೆ, ಕಿವುಡನಂತೆ ಇರುತ್ತಾನೆ. ಅವನನ್ನು ಅರಿತುಕೊಳ್ಳುವುದು ಯಾರಿಗೂ ಆಗುವುದಿಲ್ಲ. ಬ್ರಹ್ಮಜ್ಞನೇ ಅವನನ್ನು ಗುರುತಿಸಬಲ್ಲನು ಎಂದು ಒಂದು ಮಾತು ಪ್ರಚಲಿತವಾಗಿದೆ. ಸರ್ವಮಾನ್ಯವಾಗಿದೆ. ಅದು ಯಾವ ಉಪನಿಷತ್ತಿನಲ್ಲಿದೆಯೆಂದು ತಿಳಿದಿಲ್ಲ.

ಲೋಕದಲ್ಲೂ ಹಾಗೆಯೇ ಕಂಡುಬಂದಿದೆ. ಅವರು ಆಳರಸರು, ಶಾಸನಗಳನ್ನು ತರುವವರು, ನಾಯಕರು. ಆದುದರಿಂದ ಅವರ ಪುರಾಣವೇ ಚಿಕ್ಕ ತೆರೆಗಳ ಮೇಲೆ ಪತ್ರಿಕೆಗಳಲ್ಲಿ ರಗಡಾಗಿ ಕಂಡುಬರುತ್ತದೆ.

ಅವರ ಮೇಲೆ ಸಾವಿರ ಆರೋಪಗಳಿವೆ. ಅಧಿಕಾರದ ದುರುಪಯೋಗ, ಹಣ ವನ್ನು ಬೇಕಾಬಿಟ್ಟಿ ತೊಡಗಿಸುವುದು, ಲಂಚ ರುಷವತ್ತಿನ ಆರೋಪ, ಏನೆಂದರೆ ಅದು ಅವರು ಸರ್ವಧರ್ಮ ಸಹಭಾವ, ಕೋಮು ಸೌಹಾರ್ದ, ಅಗಲಿದ ನಾಯಕರ ಆದರ್ಶಗಳ ಪಾಲನೆ ಇತ್ಯಾದಿ ಹೇಳಿಕೆಕೊಡುತ್ತಾರೆ. ಸ್ವಧರ್ಮ ಪರಿಪಾಲನೆ ಮಾಡು ಮಾಡುವುದಿಲ್ಲ. ಜಾತಿಕಲಹದ ಅಪಾಯಕ್ಕೆ ಕಣ್ಣು ಮುಚ್ಚಿಕೊಂಡಿದ್ದಾರೆ. ಹಿಂದಿನ ನಾಯಕರ ಕೆಲವು ಆದರ್ಶ ಪಾಲನೆಗಳಲ್ಲಿ ಅವರನ್ನು ಮೀರಿಸುತ್ತಾರೆ. ಹೊಸ ಆರ್ಥಿಕ ನೀತಿಯು ಲಾಭದ ವಿಷ ತಟ್ಟಿಬಿಟ್ಟಿದೆ.

ವಿದೇಶೀ ಭಯೋತ್ಪಾದನೆ, ರಾಷ್ಟ್ರವಿರೋಧಿ ಚಟುವಟಿಕೆಗಳನ್ನು ಉಗ್ರವಾಗಿ ಖಂಡಿಸುತ್ತಾರೆ. ಅವು ಮಾತ್ರ ಹರಡುತ್ತಲೇ ಇವೆ.

ಪ್ರಜಾಪ್ರಭುತ್ವ ಓಟಿನ ಬೇಟೆ. ಅದರಲ್ಲಿ ಏನು ಮಾಡಿದರೂ ತಪ್ಪಲ್ಲ ಅಂತ ಕಾಣುತ್ತದೆ. ಹಿಂದೆ ಭಾರತ ವಿಶ್ವಶಾಂತಿ ಅಂತ ಬೊಬ್ಬೆ ಹೊಡೆಯುತ್ತಿತ್ತು. ಈಗ? ಸಮತಾವಾದ ಅಂತ ಗರ್ಜಿಸುತ್ತಿತ್ತು. ಈಗ? Where are the songs of spring; Aye, where are they ?

ಶುಭವನ್ನು ಹಾರೈಸುವುದು ಅಪರಂಜಿಯ ಕರ್ಮ.



ಪ್ರಕಾಶ್

ಕಾವೇರಿ ಜಲ ವಿವಾದ ವಿಚಾರಣೆ; ತಬ್ಬಿಬ್ಬಾದ ತಮಿಳುನಾಡು ತಜ್ಞ

–ಸುದ್ದಿ

ಅವರ ಹಾದಿ ಸು–ಲಲಿತವಾಗಲಿಲ್ಲ !

* * *

ಪ್ರಧಾನಿಗೆ ಲಂಚ ನೀಡಿಲ್ಲ

–ಶ್ರೀ ಬಂಗಾರಪ್ಪ

ಅಂದರೆ........ಮತ್ತಾರಿಗೆ ? ?

* * *

ಕರ್ನಾಟಕ ರಾಜಕೀಯ ; ವೀಕ್ಷಕರಾಗಿ ಜಗನ್ನಾಥ ಮಿಶ್ರ

–ಪತ್ರಿಕೆ

ಅವರ ಯತ್ನದಲ್ಲೂ ಮಿಶ್ರ ಫಲ ? ?

* * *

ಉತ್ತರ ಐರ್ಲೆಂಡ್: ಸಿಲ್ಲದ ಸಮಸ್ಯೆ

—ಸುದ್ದಿ

ಆ ಸಮಸ್ಯೆಗೆ ಉತ್ತರವಿಲ್ಲ !

* * *

'ಕುಮಾರ ಕೃಪ'ದಲ್ಲಿ ರಾಜಕೀಯ ವೀಕ್ಷಕರು

—ಸುದ್ದಿ

'ನರಸಿಂಹ ಕೃಪ' ಯಾರ ಮೇಲೋ ?

* * *

ಕೋಲಾಹಲ ಹಿಂದೆ ಬಂಗಾರಪ್ಪ ಕೈವಾಡ

-ರಾಜಕೀಯ ಸುದ್ದಿ

ಗವಾಕ್ಷಿಗಳನ್ನ ಭದ್ರವಾಗಿ ಮುಚ್ಚಲಿಲ್ಲ ! !

* * *

ಬೆಂಗಳೂರಿನಲ್ಲಿ ಶಿವಾಜಿ ಪ್ರತಿಮೆ ಅನಾವರಣ

—ಸುದ್ದಿ

ಓಹೋ, ಕದನ ಶುರುವಾಗುವಂತಿದ !

* * *

'ವಿ.ಐ.ಪಿ.' ಅಂದರೆ ವೇಲೆ ಇಲ್ಲಾದ ಪೈಯು ಅಂದರ್ಥ

—ಶ್ರೀ ಶೇಷನ್

ಭಾರತವನ್ನು ಅವರು ಅರ್ಥಮಾಡಿಕೊಂಡಂತಿದೆ !

* * *

"ಶಾಂತಾ ಅತ್ತೆ ಇನ್ಮೇಲೆ ಯಾಕೆ ಬರೆಯೋದಿಲ್ಲ ಅಂಕಲ್ ?" ಅಂತ ಅಪರಂಜಿ ಕೇಳಿದಾಗ ಗಂಟಲು ಒತ್ತಿ ಬಂದು ಅಂಕಲ್‌ಗೆ ಉತ್ತರಿಸಲಾಗಲಿಲ್ಲವಂತೆ.



ಶ್ರದ್ಧಾಂಜಲಿ

ಎಂ. ಶಿವಕುಮಾರ್

ಅಂದು ಮುಂಜಾನೆಯ ದೂರವಾಣಿಯ ಕರೆ ನಿರೀಕ್ಷಿತವಾದದ್ದೇ. ಅಮೇರಿಕನ್ accentನಲ್ಲಿ "Mr. Shiv Kumar, My mother passed away" ಎಂದು ಪೂರ್ಣಿಮಾ ತಿಳಿಸುವ ಹೊತ್ತಿಗಾಗಲೇ ನನಗೆ ಶ್ರೀಮತಿ ಶಾಂತಾ ರಘುರವರ ನಿಧನದ ಸುದ್ದಿ ಮಿತ್ರರೊಬ್ಬರಿಂದ ತಿಳಿದಿತ್ತು. ತ್ವರೆಯಿಂದ ಜಯನಗರದ ಮೂರನೇ ಬ್ಲಾಕಿನಲ್ಲಿನ ಅವರ ಮನೆಗೆ ಹೋದೆ. ವೆರಾಂಡಾದಲ್ಲಿ ಶಾಂತಾರವರು ಚಿರನಿದ್ರೆಯಲ್ಲಿದ್ದರು. ಎರಡು ನಿಮಿಷ ಕಾಲಬಳಿಯಲ್ಲಿ ನಿಂತು, ಒಳಕ್ಕೆ ಹೋಗಿ ಅವರ ಪತಿ ಡಾ|| ಸಿ. ಆರ್. ರಘು ಅವರನ್ನು ಭೆಟ್ಟಿಯಾದೆ. ರಘು ಎಂದಿನಂತೆ ಶಾಂತ ಮುಖ ಮುದ್ರೆಯಿಂದ, ಸಮಚಿತ್ತತೆಯಿಂದ ಮಾತನಾಡಿದರು. ಒಳಗೆ ಭುಗಿಯುತ್ತಿದ್ದ ಅಳಲಿನ ಮೇಲೆ ಅವರಿಗೆ ಸಂಪೂರ್ಣ ಹತೋಟಿಯಿದ್ದಂತೆ ತೋರಿತು. "ಹಿಂದೊಮ್ಮೆ ಶಾಂತಾ ತನ್ನ ಕಣ್ಣುಗಳನ್ನು ದಾನಮಾಡಲು ಕಾರ್ಡು ತುಂಬಿ, ಕಣ್ಣಿನ ಬ್ಯಾಂಕಿಗೆ ಕೊಡುವ ಆಲೋಚನೆ ಮಾಡಿದ್ದರು. ಕಾರ್ಡು ಗೀರ್ಡೆಲ್ಲಾ ಯಾಕೆ, ಆ ಸಮಯ ಬಂದಾಗ ನಾನಿದ್ದರೆ ಖಂಡಿತ ವ್ಯವಸ್ಥೆ ಮಾಡ್ತೇನೆ ಅಂತ ಹೇಳಿದ್ದೆ. ನಿನ್ನೆ ರಾತ್ರಿ ಕಣ್ಣಿನ ಬ್ಯಾಂಕ್‌ನವರನ್ನು ಕರೆದು ಆ ಮಾತನ್ನು ನಡೆಸಿಕೊಟ್ಟೆ" ಎಂದು ರಘು ಹೇಳಿದರು.

ಶಾಂತಾ ಮತ್ತು ರಘು ದಂಪತಿಗಳೊಂದಿಗೆ ನನ್ನ ಗೆಳೆತನ ಮೂರು ದಶಕಗಳಷ್ಟು ಹಳೆಯದು. ದೇವಾಂಗ ಹಾಸ್ಟೆಲಿನಲ್ಲಿ ಅರವತ್ತೆರಡರಲ್ಲಿ ನಡೆದ ಅವರ ಮದುವೆಗೆ ಹೋಗಿದ್ದೆ. ಅನಂತರ ಡಾ|| ರಘು ಬಳ್ಳಾರಿಗೆ ಹೋದದ್ದರಿಂದ ನಮ್ಮ ಸಂಪರ್ಕ ಕಡಿದಿತ್ತು. 'ಅಪರಂಜಿ'ಯನ್ನು ಪ್ರಾರಂಭಿಸಿದ ಹೊಸದರಲ್ಲಿ ರಘುರವರ ತಂಗಿ ಪ್ರಫುಲ್ಲ "ನನ್ನ ಅತ್ತಿಗೆ ಚೆನ್ನಾಗಿ ಲೇಖನ ಬರೀತಾರೆ. ಇಗೋ ನೋಡಿ ಅಪರಂಜಿಗೊಂದು ಲೇಖನಕಳಿಸಿದ್ದಾರೆ" ಎಂದು ಹೇಳಿ ಲೇಖನವೊಂದನ್ನು ಕೊಟ್ಟಂದಿನಿಂದ ರಘು ದಂಪತಿಗಳೊಂದಿಗೆ ನನ್ನ ಸ್ನೇಹ ಮತ್ತೆ ಬೆಳೆಯಿತು. ಅಂದಿನಿಂದ ಶಾಂತಾ ಅಪರಂಜಿಗೆ ತಪ್ಪದೇ ಲೇಖನಗಳನ್ನು ಕಳಿಸುತ್ತಿದ್ದರು. ಈಚೆಗೆ ಕ್ಯಾನ್ಸರ್‌ನಿಂದ

ಬಳಲಿದ್ದರೂ ಶಾಂತಾ ಅಪರಂಜಿಗೆ ಲೇಖನ ಕಳಿಸುವುದನ್ನು ಮರೆಯಲಿಲ್ಲ. ಅಪರಂಜಿ ಓದುಗರಿಗೆ ಆಕೆಯ ಶುಭ ವಿದಾಯದ ಕೊನೆಯ ಲೇಖನ "ಗ್ಯಾರೇಜ್ ಸೇಲ್" ಈ ಸಂಚಿಕೆಯಲ್ಲಿದೆ. ಸಹಜವಾದ ಜೀವನಾಸಕ್ತಿ, ಅತೀವ ಕುತೂಹಲ ಈ ಗುಣಗಳು ಶಾಂತಾರವರ ನವಿರು ಹಾಸ್ಯಕ್ಕೆ ಒಂದು ಹೊಸ ಮೆರಗನ್ನು ಕೊಟ್ಟಿತ್ತು. ಇವರ ಹಾಸ್ಯದ ನೆಲೆ, ಸಿನಿಕತನದ ಮೊನಚು ವಿಡಂಬನೆಯಲ್ಲಿರಲಿಲ್ಲ. ಪರಿಸರದ ಓರೆ ಕೋರೆಗಳನ್ನು ಗಮನಿಸಿ, ಆಶಾಭಾವನೆಯಿಂದಲೇ ತಮಾಷೆ ಮಾಡುವ ಆರೋಗ್ಯಕರ ದೃಷ್ಟಿ ಇವರ ನಗೆ ಲೇಖನಗಳ ಸೆಲೆ. "ನಮ್ಮಮ್ಮನಿಗೆ ಎಲ್ಲ ವಿಷಯಗಳಲ್ಲೂ ಅತೀವ ಆಸಕ್ತಿ. ನನ್ನನ್ನು ನೋಡಲು ಅಮೆರಿಕೆಗೆ ಬಂದಿದ್ದಾಗ ಸದಾ ಇದೇನು? ಅದೇನು? ಅಂತ ಚಿಕ್ಕ ಮಕ್ಕಳ ತರಹ ನನ್ನನ್ನು ಕೇಳಿ ತಮ್ಮ ಕುತೂಹಲ ತಣಿಸಿಕೊಳ್ಳುತ್ತಿದ್ದರು." ಎನ್ನುತ್ತಾರೆ ಪೂರ್ಣಿಮಾ. ಈ ಕುತೂಹಲದ ಫಲವಾಗಿ ಶಾಂತಾರವರ ಅಮೆರಿಕಾ ಪ್ರವಾಸದ ಅನೇಕ ಮೋಜಿನ ಅನುಭವಗಳ ಒಂದು ಲೇಖನ ಮಾಲೆ ಅಪರಂಜಿಯಲ್ಲಿ ಮೂಡಿಬಂತು. ಶಾಂತಾ ಮೃದು ಭಾಷಿ. ಸದಾ ಹಸನ್ಮುಖಿ. ನಮ್ಮ ಮನೆಗೆ ಬಂದಾಗಲೆಲ್ಲಾ, ಉತ್ತಮ ಹಾಸ್ಯವೆಂದರೆ ಯಾವುದು? ಅಪರಂಜಿಯಲ್ಲಿ ಪ್ರಕಟ ವಾಗುವ ಹಾಸ್ಯ ಲೇಖನಗಳ ಪ್ರಬುದ್ಧತೆ ಹೇಗಿರಬೇಕು? ಎಂಬೆಲ್ಲ ವಿಷಯಗಳ ಒಗ್ಗೆ ಶಾಂತಾರವರೊಂದಿಗೆ ಸದಾ ಚರ್ಚೆ. ನಾನೊಮ್ಮೆ ತಮಾಷೆಗೆ "ಮಹಿಳೆಯರು ಬರೆಯುವ ಸಾಹಿತ್ಯಕ್ಕೆ ಉಪ್ಪಿಟ್ಟು ಸಾಹಿತ್ಯ ಅಂತ ಕರೀತಾರಂತೆ. ಅ.ರಾ. ಮಿತ್ರ ಹೇಳಿದ್ರು" ಅಂದಿದ್ದೆ ಅದನ್ನು ಕೇಳಿ ಶಾಂತಾ ನಕ್ಕಿದ್ದೂ ನಕ್ಕಿದ್ದೇ. ಅವರ ಮುಂದಿನ ಲೇಖನದಲ್ಲಿ ಈ ಉಪ್ಪಿಟ್ಟು ಸಾಹಿತ್ಯ ಬಹು ಹಾಸ್ಯಮಯವಾಗಿ ಚಿತ್ರಿತವಾಗಿತ್ತು.

ಶ್ರೀಮತಿ ಶಾಂತಾ ಒಳ್ಳೆಯ ಕತೆಗಾರ್ತಿ. ಅವರ ಸಣ್ಣ ಕಥೆಗಳು ಸುಧಾ, ಮಯೂರ, ಉತ್ಥಾನ, ಮಲ್ಲಿಗೆ, ರಾಗಸಂಗಮ, ಮುಂತಾಗಿ ಅನೇಕ ಜನಪ್ರಿಯ ಪತ್ರಿಕೆಗಳಲ್ಲಿ ಮೂಡಿಬಂದಿವೆ. ಶಾಂತಾರವರ ಮೆಚ್ಚಿನ ಬರಹಗಾರರೆಂದರೆ ಲಂಕೇಶ್ ಮತ್ತು ಪೂರ್ಣಚಂದ್ರತೇಜಸ್ವಿ. ಈ ಲೇಖಕರ ಅನೇಕ ಪುಸ್ತಕಗಳನ್ನು ನಾನು ಶಾಂತಾರವರ ಗ್ರಂಥ ಭಂಡಾರದಿಂದ ಎರವಲು ಪಡೆದದ್ದುಂಟು. ಡಿ.ವಿ ಜಿ ಯವರ "ಮಂಕುತಿಮ್ಮನ ಕಗ್ಗ" ಶಾಂತಾರವರಿಗೆ ಬಹು ಪ್ರಿಯವಾದ ಪುಸ್ತಕ. ಅಂದು ಅವರ ಮನೆಯ ವೆರಾಂಡದಲ್ಲಿ ನಿಂತಿದ್ದಾಗ ನನಗೆ ಮಂಕುತಿಮ್ಮನ ಈ ಸಾಲುಗಳು ನೆನಪಿಗೆ ಬಂದವು.

ಎಲ್ಲರಿಗಮೋಗ ನಮೋ - ಬಂಧುಗಳೆ. ಭಾಗಿಗಳೆ
ಉಲ್ಲಾಸಮಿತ್ರವರೆ, ಮಾನವ ತೊಳೆದವರೆ
ಟೊಳ್ಳು ಜಗ, ಸಾಕು ಬಾಳ್ - ಎನಿಸಿ ಗುರುವಾದವರೆ
ಕೊಳ್ಳಿರೀ ನಮನವನು - ಮಂಕುತಿಮ್ಮ

ಎಲ್ಲರಿಗೂ ನಮಿಸಿ, ಶಾಂತಾ ನಮ್ಮಿಂದ ಕಣ್ಮರೆಯಾಗಿದ್ದಾರೆ ಯಾರು ಬಲ್ಲರು? ಈಗ ಆಕೆ ಆ ನಿಯಾಮಕನೊಂದಿಗೆ ಕುಳಿತು, ಇಲ್ಲಿನ ವಿದ್ಯಮಾನಗಳನ್ನೆಲ್ಲಾ ವಿವರ ವಾಗಿ ವರ್ಣಿಸಿ ಆತನನ್ನೂ ನಗಿಸುತ್ತಿರಬಹುದಲ್ಲವೇ !

"ಕಲ್ಲು ಕರಗುವ ಸಮಯ" ಶಿವು

"ಶಾಂತಾ ಈ ಪುಸ್ತಕಾನ ತುಂಬಾ ಮೆಚ್ಚಿಕೊಂಡಿದ್ದರು. ಓದಿನೋಡಿ" ಅಂತ ಹೇಳಿ ರಘು ನನಗೆ ಲಂಕೇಶರ "ಕಲ್ಲು ಕರಗುವ ಸಮಯ" ಕೊಟ್ಟಿದ್ದರು. ಶಾಂತಾರವರ ನಿಧನದಿಂದ ಭಾರವಾಗಿದ್ದ ಮನಸ್ಸು ಸ್ವಲ್ಪ ಹಗುರವಾಗಬಹುದೆಂಬ ಆಶೆಯಿಂದ ಅಂದು ಸಂಜೆ ಪುಸ್ತಕ ಓದಲು ಪ್ರಾರಂಭಿಸಿದೆ. ಲಂಕೇಶ್‌ರವರ ಬರಹ ನನಗೆ ಹೊಸದೇನಲ್ಲ. ಅವರ ಟೀಕೆ-ಟಿಪ್ಪಣಿಗಳು ಸದಾ ಯಾವುದಾದರೊಂದು ಹೊಸ ಅಂಶಕ್ಕೆ, ಹೊಸ ದೃಷ್ಟಿಕೋನಕ್ಕೆ, ಹೊಸ ಚಿಂತನೆಗೆ ನಾಂದಿಯಾಗುವುದು ನನ್ನ ಅನುಭವಕ್ಕೆ ಬಂದ ಸಂಗತಿ. ಹಾಗಾಗಿ ಮೊಟ್ಟ ಮೊದಲ ಕತೆ 'ದಾಹ'ದಿಂದ ಪ್ರಾರಂಭಿಸಿ, ಕೊನೆಯ ಕತೆಯವರೆಗೂ ಒಂದೇ ಸಿಟ್ಟಿಂಗ್‌ನಲ್ಲಿ ಓದಿ ಮುಗಿಸಿದೆ.

"ಒಂದು ಬಾಗಿಲು" ಸಹಜವಾಗಿಯೇ ನನ್ನ ಮನಸ್ಸನ್ನು ಸೆರೆ ಹಿಡಿಯಿತು. ನಾನೂ ಹಿಂದೆ ಅನೇಕ ಬಾರಿ ಇಂತಹ ಪೇಚಿನಲ್ಲಿ ಸಿಕ್ಕಿ, ಪಾಡುಪಟ್ಟಿದ್ದರಿಂದಲೋ ಏನೋ, ಲೇಖಕರ ದ್ವಂದ್ವ ಬಹು ಸುಲಭವಾಗಿ ಅರ್ಥವಾಗಿತ್ತು. ಬಾಳಿಗೆ ಅತಿ ಸೂಕ್ಷ್ಮವಾಗಿ ಸ್ಪಂದಿಸಿ, ಅಲ್ಲಿನ ವಿಚಿತ್ರಗಳ ಬಗ್ಗೆ ಒಂದು ಒಳನೋಟವನ್ನು ಪಡೆಯುವ ಪ್ರಯತ್ನ ಎಲ್ಲ ಕತೆಗಳಲ್ಲೂ ಕಾಣುತ್ತದೆ. ದೇವಿ ಮತ್ತು ಶಾಮಲ ಬಾಳಿನ ಈ ಸಂಕೀರ್ಣ ಆಟದಲ್ಲಿ ಮೇಲುಗೈ ಪಡೆದಿದ್ದರೆ, ತಾವು ಧೃಡವಾಗಿ ನಂಬಿದ್ದ ಮೌಲ್ಯಗಳೇ ಕೊನೆಗೆ ತಮಗೆ ಉರುಲಾಗುವ ಪರಿಸ್ಥಿತಿ ಸಾವಿತ್ರಿ, ಸುಭದ್ರ, ಇವರಿಗೆ ಒದಗುತ್ತದೆ. ದಲಿತರಿಗಾಗಿರುವ ಸಾಮಾಜಿಕ ಅನ್ಯಾಯದ ಬಗ್ಗೆ ಬರಿಯ ಕಪ್ಪು ಬಿಳುಪು ಚಿತ್ರಣಕ್ಕೆ ಹೋಗದೇ, ಅನೇಕ ಬೂದು ಬಣ್ಣದ ಸ್ತರಗಳನ್ನು ಲೇಖಕರು "ಮುಟ್ಟಿಸಿಕೊಂಡವನು", "ಸಹಪಾಠಿ" ಕತೆಗಳಲ್ಲಿ ಗುರುತಿಸಿದ್ದಾರೆ.

ಜನವರಿ ಎರಡರಂದು ನಾನು ಉಡುಪಿಯಲ್ಲಿದ್ದಾಗ, ಈ ಪುಸ್ತಕಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಿಕ್ಕ ಸುದ್ದಿ ತಿಳಿಯಿತು. ಪುಸ್ತಕ ಓದಿದಮೇಲೆ, ಒಬ್ಬ ಲೇಖಕ ಲಂಕೇಶ್‌ರವರಷ್ಟು ಸಂವೇದನಾಶೀಲನಾದರೆ, ಸೆನ್ಸಿಟಿವ್ ಆದರೆ, ಬಾಳಿನುದ್ದಕ್ಕೂ ಅನೇಕ ಆಘಾತಗಳನ್ನು ಆಹ್ವಾನಿಸಿದಂತಾಗುತ್ತದಲ್ಲಾ ಅಂತಲೂ ಅನ್ನಿಸಿತು. ಮಾನ್ಯ ಶ್ರೀ ಲಂಕೇಶ್‌ಅವರಿಗೆ ಅಪರಂಜಿಯ ತುಂಬು ಹೃದಯದ ಅಭಿನಂದನೆಗಳು.

ಹನಿಗವನ ಲೋಕದಲಿ
ಇರುವುದೊಂದೇ ಹಸ್ತಿ
ಡುಂಡಿರಾಜರಿಗಾಯ್ತು
ಭಾರ್ಗವ ಪ್ರಶಸ್ತಿ

ಹಿರೇಮಗಳೂರಿನ ಭಾರ್ಗವ ಪ್ರಕಾಶನದವರು, 1993-94 ಸಾಲಿನ ಭಾರ್ಗವ ಪ್ರಶಸ್ತಿಯನ್ನು ಖ್ಯಾತ ಕವಿ, ಲೇಖಕ, ಶ್ರೀ ಎಚ್. ಡುಂಡಿರಾಜ್‌ರಿಗೆ ನೀಡಿದರು. ಡಿಸೆಂಬರ್ 26ರಂದು ಚಿಕ್ಕಮಗಳೂರಿನಲ್ಲಿ ನಡೆದ ಈ ಸಮಾರಂಭದಲ್ಲಿ ಶ್ರೀ ವೇಣುಗೋಪಾಲ ಸೊರಬ ಉಪಸ್ಥಿತರಿದ್ದು, ಪ್ರಶಸ್ತಿ ಪ್ರದಾನ ಮಾಡಿದರು. ಅಪರಂಜಿ ಬಳಗದವರೇ ಆದ ಶ್ರೀ ಡುಂಡಿರಾಜರನ್ನು ಅಪರಂಜಿ, ಬಳಗದ ಎಲ್ಲರ ಪರವಾಗಿ, ಅಭಿನಂದಿಸುತ್ತಾಳೆ.

ಹಬ್ಬದ ಉಡುಗೊರೆ

ಯುಗಾದಿ ಹತ್ತಿರ ಬರುತ್ತಿದೆ. ಬಂಧು ಮಿತ್ರರಿಗೆ ಒಂದು ಉಡುಗೊರೆ ಆರಿಸುವ ಸನ್ನಾಹದಲ್ಲಿ ನೀವಿದ್ದರೆ, ನಮ್ಮದೊಂದು ಸಲಹೆ. ನಿಮ್ಮ ಮಿತ್ರರಿಗೆ ಅಪರಂಜಿಯ ಸದಸ್ಯತ್ವವನ್ನು ಬಳುವಳಿಯಾಗಿ ಏಕೆ ನೀಡಬಾರದು? ಈ ಕೆಲಸ ಬಹು ಸುಲಭ. ಕೆಳಗಿನ ಫಾರಂಅನ್ನು ತುಂಬಿ, ಸೂಕ್ತ ಚೆಕ್‌ನೊಂದಿಗೆ ನಮಗೆ ತಲುಪಿಸಿ. ಒಂದು ಒಳ್ಳೆಯ ವಿನ್ಯಾಸದ ಗ್ರೀಟಿಂಗ್‌ನೊಂದಿಗೆ ಅಪರಂಜಿಯ ಯುಗಾದಿ ಸಂಚಿಕೆಯನ್ನು ನಿಮ್ಮ ಬಂಧು ಮಿತ್ರರಿಗೆ ರವಾನಿಸುತ್ತೇವೆ. ಅನಂತರ ಚಂದಾ ಅವಧಿಗನುಸಾರವಾಗಿ, ಪ್ರತಿ ತಿಂಗಳೂ ನಿಮ್ಮ ನೆನಪು ಅಪರಂಜಿಯ ತಿಳಿನಗೆಯ ಮೂಲಕ ಅವರಿಗೆ ತಲುಪುತ್ತದೆ. ಯುಗಾದಿ ಹಬ್ಬಕ್ಕೆ ಮಾತ್ರವಲ್ಲ, ದೀಪಾವಳಿ, ಹುಟ್ಟುಹಬ್ಬ, ಮದುವೆಯ ವಾರ್ಷಿಕೋತ್ಸವ ಹೀಗೆ ಯಾವ ಸಂದರ್ಭಕ್ಕಾದರೂ ನೀವು ಈ ಅಪರಂಜಿ ಉಡುಗೊರೆಯನ್ನು ಕಳಿಸಬಹುದು. ತ್ವರೆಮಾಡಿ. ನಗೆ ಸಂಸ್ಕೃತಿಯನ್ನು ಹರಡಿ.

–ಶಿವಕುಮಾರ್

ಅಪರಂಜಿಯ ಉಡುಗೊರೆಯನ್ನು ನಮ್ಮ ಮಿತ್ರರಿಗೆ ಕಳುಹಿಸಲು ಉತ್ಸುಕರಾಗಿದ್ದೇವೆ. ದಯವಿಟ್ಟು ಕೆಳಗಿನ ವಿಳಾಸಕ್ಕೆ ಸಂಚಿಕೆಯನ್ನು ಕಳುಹಿಸಿ. ಚೆಕ್ ಅನ್ನು ಈ ಫಾರಂನೊಂದಿಗೆ ಇರಿಸಿದ್ದೇನೆ.

ಸಹಿ

ಸಂಚಿಕೆಯನ್ನು ಇವರಿಗೆ ಉಡುಗೊರೆಯಾಗಿ ಕಳುಹಿಸಿ:

.... ☐ ವಾರ್ಷಿಕ ಚಂದಾ ರೂ. 25/-

.... ☐ ಆಜೀವ ಚಂದಾ ರೂ. 250/-

....

.... ರ ಚೆಕ್ಕನ್ನು ಈ ಫಾರಂನೊಂದಿಗೆ ಲಗತ್ತಿಸಿದೆ.

ಚೆಕ್ ನಂ................ ... ಬ್ಯಾಂಕ್ ....

(ಬೆಂಗಳೂರು ಹೊರಗಿನ ಚೆಕ್‌ಗಳಿಗೆ ಸೂಕ್ತ ಬ್ಯಾಂಕ್ ಕಮಿಷನ್ ಸೇರಿಸಿ ಕಳುಹಿಸಿ)

9

'L' ಫಾರ್ ಲರ್ನಿಂಗ್

ಸೀ. ಆರ್. ಸತ್ಯ

ನಮ್ಮ ಜೀವನದಲ್ಲಿ "L" ಬೋರ್ಡು ಎಷ್ಟು ಮಹತ್ವವಾದದ್ದು ಅನ್ನೋದು ಈಚೀಚೆಗೆ ಅರ್ಥವಾಗ್ತಾ ಇದೆ ನೋಡಿ, ಥ್ಯಾಂಕ್ಸ್ ಟು ಪೀತಾಂಬ್ರು.

ಪೀತಾಂಬ್ರು (ನನ್ನ ಸೋದರಮಾವ) ಹ್ಯಾಗೆ ಡಾಕ್ಟರಾದ ಅಂತ ನನಗೆ ಹೇಳೋಕ್ಕೆ ನಾಚಿಕೆಯಾಗುತ್ತೆ. ಆದರೆ ಡಾಕ್ಟರಾದ ಮೇಲೆ ಅವನಿಗೆ ಒಂದೆರಡು ವರ್ಷಗಳ ಕಾಲ ಪೇಷೆಂಟೂ ಅಂದ್ರೆ ಸಾಕು, ಕೈ ಕಾಲೆಲ್ಲಾ ನಡುಗಿ ಹೋಗೋದು. ಪೇಷೆಂಟುಗಳ ಸ್ಥಿತಿ ಜಾಸ್ತಿ ಸೀರಿಯಸ್ಸಾದಷ್ಟೂ ಇವನ ಅವಸ್ಥೆ ಅದೇ ಪ್ರಮಾಣ ದಲ್ಲಿ ಜಾಸ್ತಿಯಾಗೋದು. ಇಂಜಕ್ಷನ್ ಚುಚ್ಚೋ ಸಮಯದಲ್ಲಂತೂ ಕೈ ಸಿಕ್ಕಾ ಪಟ್ಟೆ ನಡುಗಿ ಸೂಜಿ ಎರಡು ಭಾಗ ಆಗೋದು ಒಂದು ಬಾಕಿ. ಈ ಸ್ಥಿತಿಯಲ್ಲಿ ಪೀತಾಂಬ್ರು ಡ್ಯೂಟಿನಲ್ಲಿರೋವಾಗ ಧರಿಸುವ ಬಿಳಿ ಕೋಟಿನ ಮೇಲೆ ಅವನ ತಂಗಿ ತಮಾಷೆಗೆ-"L" ಫಾರ್ ಲೌವ್-ಅಂತ ಕೆಂಪು ದಾರದಲ್ಲಿ ಎಂಬ್ರಾಯಿಡರಿ ಮಾಡಿದ್ಲು. "L" ಅಕ್ಷರ ಮಾತ್ರ ದೊಡ್ಡದಾಗಿ ದೂರದಿಂದಲೇ ಕಾಣೋ ಹಾಗಿತ್ತು. ಅವನು ಆ ಕೋಟನ್ನು ಹಾಕ್ಕೊಂಡು ಬಂದ ಮೊದಲನೇ ದಿವಸ ವಾರ್ಡಿನಲ್ಲಿದ್ದ ಅವನ ಜೊತೆ ಡಾಕ್ಟರುಗಳು, ನರ್ಸುಗಳು ಗುಸು ಗುಸು ಅಂತ ನಕ್ಕಿದ್ದರು. ಯಾರೋ ಒಬ್ಬ ಪೇಷೆಂಟು, "ರೀ L ಬೋರ್ಡು ಡಾಕ್ಟ್ರೇ ಅಂತ ಬೇರೆ ಎಲ್ಲರಿಗೂ ಕೇಳೋ ಹಾಗೆ ಕೂಗಿದ್ದ. ಅರ್ಧಕ್ಕರ್ಧ ಪೇಶೆಂಟುಗಳು ನಮಗೆ ಪರ್ಮನೆಂಟ್ ಲೈಸೆನ್ಸ್ ಇರೋ ಡಾಕ್ಟ್ರು ಬೇಕು, ಇವರು ಬೇಡ ಅಂತ ಬೇರೆ ಮೊಂಡು ಹಿಡಿದಿದ್ದಕ್ಕೆ ಪೀತಾಂಬ್ರುಗೆ ಕೆಲಸಾನೂ ಅವತ್ತಿಂದ ಕಮ್ಮಿ ಆಯ್ತು. ಮಿಕ್ಕಿದ ಎಲ್ಲಾ ಡಾಕ್ಟರುಗಳು ರಜೆ ಹಾಕಿದ ದಿನ ಗಳಲ್ಲಿ ಮಾತ್ರ ನಮ್ಮ ಪೀತಾಂಬ್ರುಗೆ ಇಂಪಾರ್ಟೆನ್ಸು – ಇಲ್ಲದಿದ್ದರೆ ಅವನು ಯಾರಿಗೂ ಬೇಡ !

ಅಂತಹ ಒಂದು ದಿನ, ಎಮರ್ಜನ್ಸಿವಾರ್ಡ್‌ಗೆ ಟ್ರಾಫಿಕ್ ಇನ್‌ಸ್ಪೆಕ್ಟರ್ ಸಿಂಗಣ್ಣ ಅಡ್ಮಿಟ್ ಆದರು. ಯಾರೋ "L" ಬೋರ್ಡ್ ಸ್ಕೂಟರ್‌ನವರು ರೆಡ್ ಲೈಟ್ ಜಂಪ್ ಮಾಡಿ ಇವರು ಸಿಗ್ನಲ್ ತೋರಿಸ್ತಿದ್ದ ಕೈಗೇ ಹೊಡೆದು ಕೆಳಗೆ ಉರುಳಿಸಿದ್ದನಂತೆ. ಅರ್ಧ ಜ್ಞಾನದಲ್ಲಿ ಉಕ್ಕಿ ಬಂದಿದ್ದ ಕೋಪದಲ್ಲಿ "ಈ 'L' ಬೋರ್ಡ್‌ನವರನ್ನೆಲ್ಲಾ ಸುಟ್ಟು ಬೂದಿ ಮಾಡ್ತೀನಿ" ಅಂತ ಪೋಲೀಸ್ ಅಂಬುಲೆನ್ಸ್

ನಲ್ಲೇ ಸಿಂಗಣ್ಣ ಶಪಥ ಮಾಡಿದ್ದರಂತೆ. ಸರಿ ಎಮರ್ಜನ್ಸಿವಾರ್ಡ್‌ನ ಬೆಡ್‌ನಲ್ಲಿ ಮಲಗಿಸಿದ ತಕ್ಷಣ, ನಮ್ಮ ಪೀತಾಂಬ್ರು ಇಂಜಕ್ಷನ್ ಟ್ಯೂಬ್ ಹಿಡ್ಕೊಂಡು ಸಿಂಗಣ್ಣನವರ ಪೃಷ್ಠಕ್ಕೆ ಕೈ ಹಾಕಿದನಂತೆ. ತಕ್ಷಣ ಅವನ ಕೋಟಿನ ಮೇಲಿನ "L" ಅಕ್ಷರ ಸಿಂಗಣ್ಣನವರ ಕಣ್ಣಿಗೆ ಬಿದ್ದು, "ಅಲ್ಲಿ ನನ್ನ ಹೊಡೆದು ಕೆಡವಿದ್ದಲ್ಲದೆ ಇಲ್ಲೀಗೂ ಬಂದ್ಯೇನೋ ರ್‍ಯಾಸ್ಕಲ್ ?" ಅಂತ ಪೀತಾಂಬ್ರು ಕತ್ತು ಹಿಚುಕಿ ಧಡಾ ಭಡಾ ಅಂತ ಬಲಗೈನಲ್ಲೇ ಬಾರಿಸಿಟ್ಟರಂತೆ. ಪೀತಾಂಬ್ರೂನೂ ಅದೇ ಎಮರ್ಜೆನ್ಸಿ ವಾರ್ಡಿನಲ್ಲಿ ಸಿಂಗಣ್ಣನವರ ಬೆಡ್ ಪಕ್ಕದಲ್ಲೇ ಖಾಲಿ ಇದ್ದ ಇನ್ನೊಂದು ಬೆಡ್‌ನಲ್ಲಿ ಸೆಲ್ಫ್ ಅಡ್ಮಿಟ್ ಮಾಡ್ಕೊಂಡನಂತೆ ಪಾಪ. ಅವತ್ತಿನಿಂದ ಆ ಬಿಳಿ ಕೋಟನ್ನು ಹಾಕ್ಕೊಳ್ಳೋದು ಬಿಟ್ಟ ಅನ್ನೋದು ಬೇರೆ ಸುದ್ದಿ).

ಈ ಗುಡ್ ಓಲ್ಡ್ ಪೀತಾಂಬ್ರು ಮದುವೆ ಆಗೋದಕ್ಕೂ ಅವನಿಗೆ ಹೊಸ ಮಾರುತಿ ಕಾರು ಶೋರೂಮಿನಿಂದ ಸಿಗೋದಕ್ಕೂ ಒಂದೇ ಸಮಯ ಬರಬೇಕೇ ? ಟೆಂಪರರಿಯಾಗಿ ಡ್ರೈವಿಂಗ್ ಲೈಸನ್ಸ್‌ನ ಒಂದು ವಾರದ ಹಿಂದೆ ಪಡ್ಕೊಂಡಿದ್ದ. ದುಂತುವರ್ಜಿಯಿಂದ ತಾನೇ ಖುದ್ದಾಗಿ ಎರಡು 'L' ಬೋರ್ಡುಗಳನ್ನು ಬರೆದು ಕಾರಿಗೆ ತಗಲಾಕೋಕ್ಕೆ ಸಿದ್ಧತೆ ಮಾಡ್ಕೊಂಡ. ತನ್ನ ಮದುವೆ ರಿಸೆಪ್ಶನ್ ಆದ ತಕ್ಷಣ ಹೊಸಾ ಹೆಂಡ್ತೀನೂ ಕರ್ಕೊಂಡು ಊಟಿಗೆ ಹೋಗೋಕ್ಕೆ ಅಂತ ತನ್ನ ಬಟ್ಟೆ ಬರೆ ಇರೋ ಪೆಟ್ಟಿಗೆನೆಲ್ಲಾ ಕಾರಿನಲ್ಲಿ ಇಟ್ಟ. ಎಲ್ಲರೂ ಹ್ಯಾಪಿ ಹನಿಮೂನ್ ಹ್ಯಾಪಿ ಜರ್ನಿ ಅಂತ ಹಾರೈಸೋಕ್ಕೆ ನಿಂತರು. ತಕ್ಷಣ ಅವನು ನನ್ನ "L" ಬೋರ್ಡು "L" ಬೋರ್ಡು ಅಂತ ಹುಡುಕೋಕ್ಕೊ ಹೊರಟ. ಅವನ ಮಾವ ಗಾಬರಿಯಾಗಿ "ಅಳಿಯಂದರೆ, ನಾವುಗಳೂ ನಿಮ್ಮ ತರಹಾನೇ ಎಕ್ಸ್‌ಪೀರಿಯನ್ಸ್ ಇಲ್ಲದೇನೇ ಹನಿಮೂನ್‌ಗೆ ಹೋಗಿದ್ದು, ಆದರೆ ನಿಮ್ಮ ತರಹ "L" ಬೋರ್ಡ್‌ಗಳನ್ನು ಕತ್ತಿಗೆ ಹಾಕ್ಕೊಂಡು ಹೋಗಲಿಲ್ಲ. ಹನಿಮೂನ್ ಏನೂ ಅಂತ ಆ ಬೋರ್ಡ್‌ಗಳಿಲ್ಲದೇನೇ ಇನ್ನೊಂದೆರಡು ದಿನಗಳಲ್ಲಿ ನಿಮಗೆ ಅರ್ಥವಾಗುತ್ತೆ, ಹೊರಡಿ ಹೊತ್ತಾಯ್ತು". ಅಂತ ಎಲ್ಲರಿಗೂ ಕೇಳೋ ಹಾಗೆ ಉಪದೇಶ ಮಾಡಿದ್ರು. ನಾಚಿಕೆಯಿಂದ ಬಿಳಿಚಿ ಕೊಂಡು ಪೀತಾಂಬ್ರು ನೆಟ್ಟಗೇ ನಾಲ್ಕನೇ ಗೇರ್‌ನಲ್ಲೇ ಅಲ್ಲಿಂದ ಗಾಡಿಬಿಟ್ಟ.

ಇದಾದ ಸ್ವಲ್ಪ ದಿನದಲ್ಲೇ ಪೀತಾಂಬ್ರು ತನ್ನ ಕಾರಿಗೆ 'ಡಾಕ್ಟರ್' ಅಂತ ಬರೆದಿರೋ ಒಂದೇ ಸ್ಟಿಕರ್‌ನೂ ಅಂಟಿಸಿಕೊಂಡ. ಅವತ್ತಿನ ದಿನ ಸಂಜೆ ಅವನ ಆಸ್ಪತ್ರೆಯ ಸಭಾಂಗಣದಲ್ಲಿ ಯಾರೋ ಪುಣ್ಯಾತ್ಮರು "ಜನಸಂಖ್ಯೆ ನಿಯಂತ್ರಣ'ದ ಬಗ್ಗೆ ಭಾಷಣ ಮಾಡ್ತಿದ್ದರಂತೆ. ಪೀತಾಂಬ್ರು ಅಲ್ಲಿಗೆ ಕಾರಿನಲ್ಲಿ ಹೋಗಿ ಇಳಿಯು ತ್ತಿದ್ದಿದ್ದನ್ನು ನೋಡಿ ಆತ, "ಜನಸಂಖ್ಯೆ ನಿಯಂತ್ರಣಕ್ಕೆ ದೇವರು ಎಷ್ಟು ಸೊಗಸಾಗಿ ಜೋಡಿ ಮಾಡಿದ್ದಾನೆ ನೋಡ್ರೀ. ಮೊದಲೇ ಡಾಕ್ಟರು. ಜೊತೆಗೆ ಕಾರಿಗೆ L ಬೋರ್ಡು ಬೇರೆ. ಮನುಷ್ಯರನ್ನು ಕೊಲ್ಲೋಕ್ಕೆ ಇದಕ್ಕಿಂತ ಏನು ಬೇಕು ? ಡೆಡ್ಲಿ ಕಾಂಬಿನೇಶನ್ನು !" ಅಂತ ನಗೆಯಾಡಿದ್ದನಂತೆ.

ಇದೆಲ್ಲಾ ಪೀತಾಂಬ್ರುಗೆ ಜೀವನದಲ್ಲಿ ಸ್ಟಾರ್ಟಿಂಗ್ ಟ್ರಬಲ್ ತರಹ ಶುರುವಾಗಿ ಅವನು ಮಧ್ಯ ವಯಸ್ಕನಾಗೋ ಹೊತ್ತಿಗೆ ಎಲ್ಲಾ ಮರೆತೇ ಹೋಯಿತು. ಯಾವಾಗಲೋ ಎಂದೋ ರಾತ್ರಿ ನಿದ್ರೆಯಲ್ಲಿ ದೊಡ್ಡ L ಅಕ್ಷರ ಕಾಣಿಸಿಕೊಂಡು ಸ್ವಲ್ಪ ಬೆವರೋದು ಬಿಟ್ರೆ ಅವನಿಗೆ ಅದರಿಂದ ವರ್ಷಗಟ್ಟಲೆ ಯಾವ ರೀತಿ ತೊಂದರೇನೂ ಆಗಲಿಲ್ಲ ಅಂತ ಅನ್ನಲೇ ಬೇಕು.

ಬಟ್ ಪೂರ್ ಪೀತಾಂಬ್ರು, ಹಿ ಈಸ್ ಎನ್ ಅನ್‌ಲಕ್ಕಿ ಚ್ಯಾಪ್. ಮೊನ್ನೆ ಅವನ ಶಾಂತ ಜೀವಕ್ಕೆ ಇನ್ನೊಂದು "L" ಘಟನೆ ಆಯ್ತು. ಅವನ ತಂಗಿ ಅಮೇರಿಕೆಯಿಂದ ಒಂದು ಟೀಶರ್ಟ್ ಕಳಿಸಿದ್ದಳು. ಅದು ಲಾಸ್ ಏಂಜಲೀಸ್ (LA) ನಗರದ ಹಿರಿಮೆಗೆ ಅಂತ ಮಾರಾಟ ಮಾಡಿದ್ದು. ಅದರ ಹಿಂಭಾಗ ಮುಂಭಾಗದಲ್ಲಿ "L" ಫಾರ್ LA ಅಂತ ಕೆಂಪು ಅಕ್ಷರದಲ್ಲಿ ಪ್ರಿಂಟ್ ಆಗಿತ್ತು. ಭಾನುವಾರ ತನ್ನ ಹೆಂಡತಿ ಮಕ್ಕಳೊಡನೆ ಬೆಂಗಳೂರಿನ ಹೊರಗಡೆ ಯಾವುದೋ ಜಮೀನು ಖರೀದಿ ಮಾಡೋಣ (ಫಾರ್ಮ್ ಮಾಡ್ಕೊಳ್ಳೋಕೆ) ಅಂತ ಹೋದನಂತೆ. ಆ ಹಳ್ಳೀಲಿ ಪಂಚಾಯಿತಿ ಚುನಾವಣೆ ನಡೆದು ಫಲಿತಾಂಶ ಬಂದಿತ್ತಂತೆ. ಪೀತಾಂಬ್ರು ಜಮೀನಿನ ಹತ್ತಿರ ಕಾರು ನಿಲ್ಲಿಸಿ ಹೊರೆಗೆ ಬಂದನಂತೆ. ತಕ್ಷಣ ನಾಲ್ಕು ದಾಂಡಿಗರು ಅವನನ್ನು ಹಿಡ್ಕೊಂಡು ಪಟಾಫಟ್ ಅಂತ ತದಕಿ ಓಡಿ ಹೋದರಂತೆ. ಹೆಂಡ್ತಿ ಮಕ್ಕಳು ಅವನನ್ನು ಅಲ್ಲೇ ಇದ್ದ ತಾಲೂಕು ಆಸ್ಪತ್ರೆಗೆ ಫಸ್ಟ್‌ಏಡ್‌ಗೆ ಅಂತ ಕರ್ಕೊಂಡು ಹೋದ್ರಂತೆ. ಅಲ್ಲಿದ್ದ ಡಾಕ್ಟರ್ ಇವನಿಗೆ ಔಷಧಿ ಬಳಿದು ಬ್ಯಾಂಡೇಜ್ ಕಟ್ಟಿ ಸಮಾಧಾನ ಮಾಡಿದ್ರಂತೆ. ಪೀತಾಂಬ್ರು ಪೆದ್ದು ಪೆದ್ದಾಗಿ "ನನಗೆ ಯಾಕೆ ಅವರೆಲ್ಲಾ ತದಕಿದರೋ ಅರ್ಥವಾಗಲಿಲ್ಲ ಡಾಕ್ಟ್ರೇ" ಅಂತ ಅಂದನಂತೆ.

ಅದಕ್ಕೆ ಆ ಡಾಕ್ಟ್ರು "ನನಗೂ ಒಂದು ನಿಮಿಷ ಅರ್ಥವಾಗ್ಲಿಲ್ಲ. ಈಗ ಗೊತ್ತಾಯ್ತು ಇವತ್ತು ಪಂಚಾಯತಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಅಣ್ಣಯ್ಯ ಗೆದ್ದಿದ್ದಾರೆ. ಅವರಿಗೆ ಆಗದ ಕಡೆಯವರು ನಿಮಗೆ ಹೊಡೆದಿದ್ದು" ಅಂತ ಅಂದರಂತೆ.

"ಸರಿ ನನಗೆ ಯಾಕೆ ಹೊಡೆದರು?" ಅಂತ ಪೀತಾಂಬ್ರು ಮತ್ತೆ ಕೇಳಿದ.

"ನೀವೇ ಅಲ್ಲವೇನ್ರೀ ಆ ಟೀಶರ್ಟ್ ಹಾಕ್ಕೊಂಡಿರೋದು ? ಅದರ ಮೇಲೆ L A ಅಂತ ಪ್ರಿಂಟ್ ಮಾಡ್ಕೊಂಡಿದೀರಾ. ನಮ್ಮ ಅಣ್ಣಯ್ಯನ ಇನಿಷಿಯಲ್ಸ್ Lಊ .. ನಿಮ್ಮ ಶರ್ಟ್ ಮೇಲೆ L.A. ಅಂತ ಇದ್ದಿದ್ದು ನೋಡಿ ನೀವು ಅವರ ಕಡೆಯವರು ಅಂತ ಅಂದ್ಕೊಂಡಿರಬೇಕು." ಅಂತ ವಿವರಿಸಿದರು ಡಾಕ್ಟರು.

ಇದಾದ ಈಚೀಚೆಗೆ ಪೀತಾಂಬ್ರು ದಿನ ಜೀವನದಲ್ಲಿ ಏನೂ ಮಹತ್ತರ ಘಟನೆ ನಡೆದಿಲ್ಲ. ಆದರೂ ಸೋತ ಸೌತೇಕಾಯಿಯ ಹಾಗೆ ಆಗಿದ್ದಾನೆ. ಆಧ್ಯಾತ್ಮಿಕ ಜೀವನ ಬಯಸ್ತಿದಾನೆ. ಈಚೀಚೆಗೆ ಮಾತಾಡ್ತಾ "ನನ್ನ ಜೀವಪರ್ಯಂತ ಲರ್ನಿಂಗ್ ಆಗ್ತಿದೆ ಕಣೋ. ಆ "L" ಬೋರ್ಡ್ ಪರ್ಮನೆಂಟಾಗಿ ಹಣೇಲಿ ಅಚ್ಚು ಒತ್ತ್ಕೋಬೇಕೂಂತ ಇದೀನಿ" ಅಂತ ನಗೆಯಾಡಿದ.

ಗಾಡ್ ಬ್ಲೆಸ್ ಹಿಮ್.

ಐ ಕಮಾಂಡು

ಕೆ. ಎಸ್. ಶ್ರೀಕಂಠಯ್ಯ

ಏನ್ಲೋೕವಣ್ಣ ಮಂಕಾಗ್ಕೊತ್ಬಿಟ್ಟೆ? ತೂ ತಲೆಮೇಲ್ಕ್ಯ ಆಕ್ಬಾರ್ದು. ದರಿದ್ರ ತೆಗಿ. ನೋಡ್ಲವಣ್ಣ. ಇದ್ರವ್ವನ್ ಎಣ್ಮಕ್ಳಾಗ್ಬಾರ್ದು ಮನೇಲಿ. ನಮ್ಗೊಗೋಳು. ಅವಕ್ಕೂ ಸಂಕ್ಟ. ಉಟ್ತಿದ್ದಂಗೆ ನೆಗೆದ್ಬಿದ್ದೋಗ್ಬೇಕು ಏನಂತಿ ?

ತೂ ಕಳ್ನನ್ಮಗ್ನೆ ತಂದೆ ತಾಯಿ ಬಾಯುಲ್ ಬರೋ ಮಾತಾ ಇದು? ನಿಂಗೇನ್ಲಾ ಬಂತು ಸೋಮಣ್ಣ ಇಂಗೆಲ್ಲ ಮಾತಾಡ್ತಿ ?

ಇನ್ನೇನೆಲ್ಲ ಆಗೇ ಓಯ್ತು ಚತ್ರ ಬುಕ್ ಮಾಡಾನ ಅನ್ಕೊಂಡಿದ್ರೆ ಅತ್ಲೊತ್ಲ ಚಿನ್ನ ಬೇಕಂತೆ, ಐವತ್ಸಾವ್ರ ಕ್ಯಾಸು, ಒಂದೀರೋ ಓಂಡಾ, ಯಚ್ಚಂಪ್ಟಿ ವಾಚು–ಸಾಕಾ ಸಿವಣ್ಣ ? ಯಾರತಲೆ ಒಡೀಲಿ ಏಳುಮಾತೆ, ಮಾತಾಡ್ತಾನೆ ಅಂತೀಯಲ್ಲ.

ಯಾರ್ಲಾ ಅವನು ದರ್ವೇಸಿನನ್ಮಗ ? ಏನ್ಕೆಲ್ಸ ?

ಸೊಸೈಟಿ ಇನ್‌ಸ್ಪೆಟ್ರು. ದೊಡ್ಡೆನಳ್ಳಿ ಚಂದ್ರೇಗೌಡ್ರ ಮಗ. ನೋಡೋಕೇನೊ ಚನ್ನಾಗನ್ನೆ. ನಗ್ನಗ್ತ ಮಾತಾಡ್ತಾನೆ. ಆದ್ರೆ ಅವನವ್ವನ್ನ ತೊಲ ಚಿನ್ನ ಎಲ್ತರ್ಲಿ ?

ಉಡ್ಗ ನಿನ್ಮನಸ್ಸಿಗ್ಬಂದವ್ನೆ ಅಂತ ಆದ್ರೆ ಒಂದ್ಕೆಲ್ಸ ಮಾಡಾಣ ಸೋಮಣ್ಣ. ಎಸ್ಪಿ ಸಾಏಬ್ರಿಗೇಳಿ ಒಂದು ರೇಡ್‌ಮಾಡಾನ. ನಾನೂ, ನೀನೂ, ಇನ್‌ಸ್ಪೆಟ್ರು ಜಲೀಲು, ಪುಟ್ನಂಜ, ಎಷ್ಟು ಸಿಕ್ಕಿದ್ರೂ ಅಷ್ಟೂ ನಿಂಗೇ ಮಾತ್ರ ಒಳ್ಳೇ ಪಾರ್ಟ್ ಇಡೀಬೇಕು.

ನೀ ಇಂಗಂದೆ ಅಂತ ಏಳ್ತೀನ್ನಿವಣ್ಣ.

ಅಶೋಕ ಬಾರ್‌ಗೆ ನೆನ್ನೆ ಗೋವಾದಿಂದ ಮೂರ್ಲಾರಿ ಫೆನ್ನಿ ಬಂತಂತೆ. ಕರೀಂ ಲಾರೀನಂತೆ. ರುದ್ರಪ್ಪ ಕುಡ್ಕೊಂಬಂದೇಳ್ದ.

ದೇವರ್ಮೇಲ್ಬ್ರಾರಾ ಆಕಿ ನಡಿ ವಾಗಾನ.

ನಮಸ್ಕಾರ ಸಾ. ಬನ್ನಿ ಪಳ್ಗೆ ಆಚೇನೇ ನಿಂತ್ಬುಟ್ರಲ್ಲ. ಪರ್ಚಯ ಇಲ್ದೋ ರಂಗಾಡ್ತಿರಲ್ಲ.

ನಿಮ್ಮ ಗೋಡೌನ್‌ನೋಡಬೇಕು. ಯಾರೋ ಕಳ್ಳನ್ಮಕ್ಳು ನೋಸ್ ಮಾಡಿದಾರೆ.

ನೋಸ್ ಮಾಡೀದಾರೆ ಅಂದ್ರೆ ?

ಓ ನಿಂಗೊತ್ತಿಲ್ವಾ. ನೋಸಂದ್ರೆ ಮೂಗು ಯಾವೋನೋ ತಲೆಮಾಸಿದ್ನನ್ಮಗ ಮೂಗರ್ಜಿ ಬರ್ದಾಕೀದಾನೆ. ಒಂದ್ವಾರದಿಂದ ಫೆನ್ನಿ ಬರ್ತಾ ಇದೆ ಗೋವಾದಿಂದ ಗೋಡೌನೆಲ್ಲ ಬರ್ತಿ ಆಗಿವೆ ಅಂಗೆ ಇಂಗೆ ಅಂತ ಬರ್ದವ್ನಂತೆ. ಮೂಗರ್ಜಿ ಅಂತ ಬರ್ದವ್ನಂತೆ. ಮೂಗರ್ಜಿ ಅಂತ ಸುಮ್ನೆ ಕೂರೋಕಾಗ್ತದ ? ನಮ್ಕೆಲ್ಸ ನಾವ್ಮಾಡ್ಬೇಕ್ತಾನ ?

ಹಿ ಹಿ ಹಿ ಅಪ್ಪೆತಾನೆ. ನನ್ನೆಲ್ಲಾ ಗೋಡೌನ್ನಿನಕೀನೆಲ್ಲ ಕೊಟ್ಬಿಡ್ತೀನಿ. ನಾನಿಲ್ಲೇ ಕೂತಿರ್ತೀನಿ. ನೀವೇ ಓಗಿ ಚಕ್ಮಾಡ್ಕೊಂಬನ್ನಿ ಲೈಸ್‌ನ್ಸಿಲ್ಲದ್ಮಾಲೇನಾದ್ರೂ ಸಿಕ್ರೆ ನನ್ನ ಜೇಲ್ಗಾಕಿ. ಆಯ್ತುತಾನೆ, ಮೊದಲ್ಕುತ್ಕೊಳಿ. ದೋಸೇಗೇಳೀದೀನಿ, ಸುಧಾರಿಸ್ಕೊಂಡು ನಿಮ್ಮ ಕೆಲ್ಸ ಸುರುಮಾಡಿ. ಏನ್ಸ್ವಾಮಣ್ಣ ನಾ ಏಳೋದು.

ಛೆ ಛೆ ನಮ್ಗೆ ನಿಮ್ಮೇಲ್ಕಂಡಿತ ಅನ್ಮಾನ ಇಲ್ಲ ರಾಜಣ್ಣ. ಯಸ್ಪೀ ಸಾಯೇಬ್ರ ಕೈಗೇ ಓಯ್ತು ಆ ಮೂಗರ್ಜಿ. ಸಂಜೇವಳ್ಗೆ ರಿಪೋರ್ಟ್ ಕೊಡ್ಬೇಕು ಅಂತ ಏಳವ್ರೆ. ಇನ್ನೊಂದಿಸ್ಯ. ಐಕಮಾಂಡಿಂದ ಸಿಗರೇಟ್ ಲೆಟರ್ ಒಂದು ಬಂದಿದ್ಯಂತೆ

ಸಿಗರೇಟ್ ಲೆಟರ್ ಅಲ್ರೊ ಬೆಪ್ನನ್ಮಗ್ನೆ ಸೀಕ್ರೆಟ್ ಲೆಟರು.

ಯಾವುದೋ ಆಂತೂ ಒಂದ್ಬಂದಿದ್ಯಂತೆ. ಅತ್ತಿನ್ಸೊದ್ಲಳ್ಗೆ ಒಂದ್ಸಾವ್ರಲಾರಿ ಐಶ್ಲಾಸ್ ಡ್ರಿಂಕ್ಸ್ ಜೊತೆ ಮಾಡ್ಬೇಕಂತೆ. ಐಶ್ಲಾಸು ಆಂದ್ರೆ ನೀನ್ನರಸ್ತಿರೋ ಫೆನ್ನಿ ರಾಯರ ಸೆಲ್ಯೂಟು, ವೀ ಐ ಪಿ ಲಿಕ್ಕರ್ರು—ಇನ್ನೂ ಏನೇನೋ. ಬಂತಲ್ಲಪ್ಪ ದರಿದ್ರ ಯಲಕ್ಸನ್ನು. ಇದಾನ್ನೌದ್ಬಲ್ಲೇ ಆಶ್ಸಾವ್ರ ಲಾರಿ ಸ್ಟಾಕ್ ಮಡಗವ್ರಂತೆ.

"ದೋಸೆ ರೆಡಿ ಸಾ."

ಬನ್ನಿ ಬನ್ನಿ ಕೂತ್ಕೋಳಿ. ದೋಸೆ ಆರೋದ್ರೆ, ರುಚಿ ಬರಾಕಿಲ್ಲ. ಕೂತ್ಕೋಳಿ ಸಾ, ಸಿವಣ್ಣ ಕೊಂಚ ಇಂಗ್ಬಾ.

ಏನ್ಸಿವಣ್ಣ ನೀನೂ ಸೋಮಣ್ಣ ಇದ್ದೂ ನನ್ನ ಕೊಂದ್ಬಿಟ್ರಲ್ಲ ಮತ್ತೆ. ಒಂದ್ಕೆಲ್ಸ ಮಾಡು. ನಿನ್ಕೈಲಿಂದ್ಲೆ ಇಸಕೊಟ್ಬಿಡು. ಕುಡ್ದು ಸತ್ತೋಯ್ತೀನಿ.

ಬಿಡ್ತು ಆನ್ನು ಬಿಡ್ತು ಆನ್ನು. ಅಂಗೆಲ್ಲಾ ಮಾತಾಡ್ಬೇಡ. ಒಂದುಪಾಯ ಐತೆ. ಇನ್ನೇನೆಲೆಕ್ಸನ್ ತಾನೇ. ಪಾರ್ಟಿ ಫಂಡಿಗೆ ಎರಡ್ಲಕ್ಸ ನಮ್ಮ ಆಫೀಸಿಂದ ಕೊಡಬೇಕಂತೆ. ಈ ಊರಲ್ಲಿ ಹೇಗೂ ಹನ್ನೆರಡುಬಾರಿದ ನೀವೆಲ್ಲ ಸೇರಿ ಇಷ್ಟು ಅಂತ ಕೊಟ್ಬಿಡಿ. ರೇಡೂ ಬೇಡ, ಗೋಡೌನು ಬೇಡ, ಅಂಗಿಂದಂಗೇ ಒಂಟೋಯ್ತೀವಿ.

ಅಂಗಾರೊಂದ್ಕೆಲ್ಸ ಮಾಡು. ಈಗೊಂಟೋಗಿ ಎಲ್ಲರ ಕೈಲೂ ಮಾತಾಡ್ಕೊಂಡು ಸಂಜೆ ನಾ ಬತ್ತೀನಿ.

ದೇವರು ದೊಡ್ಡವನು. ಮದುವೆ ಸಾಂಗವಾಗಿ ನೆರವೇರಿತು.

ಅಂಚೆ ವಿಳಂಬ

ಅನೇಕ ಚಂದಾದಾರರಿಗೆ ಕೆಲವೊಮ್ಮೆ ಅಪರಂಜಿ ಸಂಚಿಕೆಗಳು ಕೈಸೇರದಿರುವುದು ನಮ್ಮ ಗಮನಕ್ಕೆ ಬಂದಿದೆ. ಈ ಬಗ್ಗೆ ನಮಗೆ ಬರೆದು ತಿಳಿಸಿದರೆ, ಮರುಸಂಚಿಕೆ ಯನ್ನು ಕಳಿಸುವ ವ್ಯವಸ್ಥೆ ಮಾಡಲು ಸಾಧ್ಯವಾಗುತ್ತದೆ. ತಿಂಗಳ ಹನ್ನೆರಡನೆಯ ತಾರೀಖಿನ ನಂತರವೂ ಸಂಚಿಕೆ ನಿಮಗೆ ತಲುಪದಿದ್ದರೆ ಬರೆದು ತಿಳಿಸಿ ಸಹಕರಿಸಿ.

—ಶಿವಕುಮಾರ್



ನನ್ನ ಐಡಿಯಾ ನೋಡ್ರಿ, ಬರೀ ಪಾರ್ಟಿ ಆಫೀಸ್ ಅಂತ ಬೋರ್ಡು ತಗುಲಿಸ್ದೆ ಜನ ಟಿಕೆಟ್‌ಗೆ ಹಿಂಡು ಹಿಂಡಾಗಿ ಬರ್ತಿದಾರೆ. ಯಾವ ಪಾರ್ಟಿ ಅಂತ ನಿಧಾನವಾಗಿ ನಿರ್ಧರಿಸಿದ್ರಾಯ್ತು.

ಪೆನ್ನು

ಹೆಚ್. ಗವಿಸಿದ್ದಯ್ಯ

'ಪೆನ್ನು'
ನನ್ನ ಪಾಲಿಗೆ
'ನೀನು'
ನಿಜವಾಗಿ ಹೊನ್ನು
'ನಾಲಿಗೆ'
ನಿನಗಿದ್ದರೂ
ಮುಂದೆ ಚಾಚದೆ
'ನನ್ನ'
ಮಾತು ಕೇಳುವೆ
ಆದರೆ ಹೆಣ್ಣು ?
ಮಾತು ಮಾತಿಗೆ
ತನ್ನ ನಾಲಿಗೆ
ಉದ್ದ ಮಾಡದೆ
ನಿನ್ನಂತಿದ್ದರೆ
ಎಷ್ಟು ಚೆನ್ನು?

ರಾಜಕಾರಿಣಿ

1 'ಮಾತಿನಲಿ' ಮಾನವ ಉದ್ಧಾರಿ
ಕಾರ್ಯದಲಿ ಮಾತ್ರ ಇಲ್ಲಾರಿ
ಬರೀ ಮಾತಿನ ತರಾತುರಿ
'ಇಲ್ಲ' ನೋಡಿ ಬರಾಬರಿ

2 ವಾಗ್ದಾನಗಳ ಮಳೆಗರೆದು
ಕಾರ್ಯದಲಿ ಹಿಂದೆ ಸರಿದು
ಕುತಂತ್ರ ತುಂಬಿದ ಅಕ್ಷಿ
ಮಾನವ ರೂಪದಾ ಬಕಪಕ್ಷಿ

17

ಗ್ಯಾರೇಜು ಸೇಲ್

ಶಾಂತಾ ರಘು

ನಾವು ಅಮೇರಿಕಾದಲ್ಲಿದ್ದಾಗ, ಕ್ಲೀವ್‌ಲ್ಯಾಂಡಿನಲ್ಲಿ ನನ್ನ ಕಸಿನ್ ಪ್ರಭಳ ಮನೇಲಿ ಹದಿನೈದು ದಿನ ಇದ್ವಿ. ಸುತ್ತ ಮುತ್ತ ಬರೀ ಸಂಸಾರಸ್ಥರ ಮನೆಗಳೇ,

ಒಂದಿನ ಬೆಳಿಗ್ಗೆ ಎದ್ದು ನೋಡಿದ್ರೆ "ಮಿಸೆಸ್, ಜೂಲಿಯಾ ಕ್ರೂಗರ್ ಈಸ್ ಹ್ಯಾವಿಂಗ್ ಎ ಗ್ರ್ಯಾಂಡ್ ಗ್ಯಾರೇಜ್ ಸೇಲ್" ಅಂತ ಎದುರು ಬಂಗಲೇಲಿ ಬೋರ್ಡು. ದೊಡ್ಡ ಗ್ಯಾರೇಜು ಬಾಗಿಲು ಥಾಳಾಗಿ ತೆಗೆದಿದೆ. ಅವಳ ಬಂಗಲೆ ಮುಂದೆ ಆಗಲೇ ಜಗಿ ಜಗಿ ಜನ. ಸಾಲು ಸಾಲು ಕಾರುಗಳು.

"ಏನೇ ಅದು ?" ಅಂತ ನನ್ನ ಕಸಿನ್ನನ್ನು ವಿಚಾರಿಸಿದೆ.

"ಅಯ್ಯೋ ! ಗ್ಯಾರೇಜ್ ಸೇಲು ಅಂತ ಕೇಳಿಲ್ವಾ ನೀನು? ನಾವು ಇಂಡಿಯಾ ದಲ್ಲಿ ಹಳೇ ಸಾಮಾನು, ಬಟ್ಟೆ, ಪೇಪರ್, ಬಾಟಲ್, ಎಲ್ಲಾ ಹಳೇ ಬಾಗಿನದೋರಿಗೆ ಹಾಕೊಲ್ವೆ? ಈ ಜನ ಹಾಗೆಲ್ಲಾ ಮಾಡೊಲ್ಲ. ರೆಗ್ಯುಲರ್ ಆಗಿ, ರಾಜಾರೋಷ ವಾಗಿ, "ಸೇಲ್" ಅಂತ ಅನೌನ್ಸ್ ಮಾಡಿ, ವರ್ಷಕ್ಕೊಮ್ಮೆ ಗ್ಯಾರೇಜಿನಲ್ಲಿ ಹೀಗೆ ಹಳೆಯದು ಏನೇನಿದ್ಯೋ ಅದೆಲ್ಲಾ ಹರಡ್ಬಿಡ್ತಾರೆ. ಆ ತಮಾಷೆ ಯಾಕ್ ಕೇಳ್ತೀಯಾ ? ಆ ಜಂಕ್‌ಅನ್ನ ಕೊಂಡ್ಕೊಳ್ಳಕ್ಕೆ ಕಾರುಗಳಲ್ಲಿ ಜನ ಗುಂಪು ಗುಂಪಾಗಿ ಬರ್ತಾರೆ. ಸಂಜೆ ಒಳಗೆ ಗ್ಯಾರೇಜು ಖಾಲಿ ! ಬೇಕಾದ್ರೆ ನೋಡ್ತಾ ಇರು ತಮಾಷೆ!" ಅಂತ ವಿವರಿಸಿದ್ಳು ಪ್ರಭಾ.

"ಓಹೋಹೋ ! ಹೀಗೋ ಸಮಾಚಾರ? ಡಾಲರ್ ಹೊಳೆ ಹರೀತಾಯಿರೋ ಅಮೆರಿಕದಲ್ಲಿ, ಜನ ಮೇಲೆ, ಮೇಲೆ ಡಾಲರ್ ಕೂಡಿ ಹಾಕೋದು ಹೀಗೆ !

"ಪ್ರಭಾ ! ಅದೇನೋ ನೋಡ್ಬೇಕೂಂತ ನಂಗೂ ಆಸೆ ಕಣೆ ! ಮಿಸೆಸ್, ಕ್ರೂಗರ್‌ಗೆ ಫೋನು ಮಾಡಿ ನಾನೂ ಬಂದು ನೋಡ್ಬಹುದಾಂತ ಕೇಳೇ" ಅಂದೆ.

"ಓ! ಷ್ಯೂರ್! ನಂಗೂ ತುಂಬ ಸಂತೋಷಾನೇ! ಬೇಕಾದ್ರೆ ಅವರದ್ದೂ ಏನಾದ್ರೂ ಹಳೇ ಸಾಮಾನಿದ್ರೆ ತಂದಿಡಲಿ! ಐ ಡೋಂಟ್ ಮೈಂಡ್!" ಅಂದು ಜೂಲಿಯಾ.

ಏನಪ್ಪಾ ಇದೆ, ಅಂತ ತಲೆ ಕೆರ್ಕೊಂಡೆ. ಸಿಂಗಪೂರಿನಿಂದ ಯಾವಾಗ್ಲೋ ತಂದಿದ್ದ ಟೆಲಿಫೋನು ಕೆಟ್ಟು ಕೂತಿತ್ತು. ಇಲ್ಲೇನಾದ್ರೂ ರಿಪೇರಿಯಾಗುತ್ತೇನೋ ಅಂತ, ಇಂಡಿಯದಿಂದ ಹೊತ್ಕೊಂಡು ಬಂದಿದ್ದೆ. ಹಳದಿ ಬಣ್ಣದ ಆ ಟೆಲಿ ಫೋನನ್ನು ಎತ್ಕೊಂಡು, ಎದುರು ಮನೆಗೆ ಹೋದೆ.

"ಹಾಯ್ ಮಿಸೆಸ್ ರಘು! ಪ್ಲೀಸ್ ಎಂಜಾಯ್ ಯುವರ್ ಸೆಲ್ಫ್" ಅಂತ ಸ್ವಾಗತ ಕೊಟ್ಟು, ಗಡಬಡನೆ ಆಚೆ ಹೋದ್ಳು ಜೂಲಿಯಾ. ಜನ ಬರ್ತಾನೇ ಇದ್ರಲ್ಲ ಪಾಪ.

ಸರಿ, ಸೇಲ್‌ಗೆ ಏನೇನಿಟ್ಟಿದ್ದಾಳೆ ಅಂತ ಸುತ್ತ ಕಣ್ಣಾಡಿಸಿದೆ. ಏನ್ಹೇಳಲಿ? ಹಳೇ ಪೇಪರ್ ಒಂದೆಪ್ಪತ್ತು, ಎಂಬತ್ತು ಕೆ.ಜಿ., ಮುರುಕಲು ಟಿನ್‌ಗಳು, ಬುಟ್ಟಿ ಗಟ್ಲೆ ಬೀರ್, ವಿಸ್ಕಿ ಖಾಲಿ ಬಾಟಲುಗಳು, ಒಂದು ಹಳೇ ಗೋಡೆ ಗಡಿಯಾರ, ದುರುಕಲು ಬಿಸ್ಕತ್ತು ಮಾಡೋ ಓವನ್ನು, ಒಂದು ಕಡೆ ಸಾಲಾಗಿ ನೇತು ಹಾಕಿರೋ ಹಳೇ ಡ್ರೆಸ್ಸುಗಳು, ಕೋಟುಗಳು, ಓವರ್ ಕೋಟುಗಳು, ಒಂದು ಹಳೇ ಫ್ರಿಡ್ಜ್, ಏಳು ಬೇಸ್‌ಬಾಲ್ ಬ್ಯಾಟುಗಳು. ಹ್ಯಾಂಗರುಗಳು, ಒಂದು ಕಾರ್ಪೆಟ್, ಹಳೇ ಸೋಫಾ ಸೆಟ್ಟು, ಹಳೇ ಟೀ, ಡಿನ್ನರ್ ಸೆಟ್ಟು, ಹೀಗೆ ಹೇಳ್ತಾ ಹೋಗ್ಬಹುದು!

"ಪರವಾಗಿಲ್ವೆ!" ಅಂದ್ಕೊಂಡು ಫ್ರಿಡ್ಜ್ ಮೇಲೆ ನನ್ನ ಟೆಲಿಫೋನನ್ನು ಧೈರ್ಯವಾಗಿ ಇಟ್ಟೆ!

ಆಮೇಲೆ ಯಾಕ್ಕೇಳ್ತೀರಾ? ಒಬ್ಬೊಬ್ರೂ ಒಂದೊಂದು ಸಾಮಾನಿಗೂ ಮುತ್ಕೊಂಡು, ಹಿಂದೆ ಮುಂದೆ ತಿರುಗ್ಸಿ ನೋಡಿ, ಪಟಪಟ ಮೂಗಲ್ಲೇ ಮಾತಾಡಿ

ನಾನು ಆಚೆ ಹೋಗಿ ತಮಾಷೆ ನೋಡ್ತಾ ನಿಂತ್ಕೊಂಡೆ. ಎಲ್ರೂ ಒಂದೊಂದು ಸಾಮಾನಾಗಿ ಕಾರುಗಳಲ್ಲಿ ಸಾಗಿಸ್ಕೊಂಡು ಹೊರಟೇ ಹೋದ್ರು! ಕೊನೇಗೆ ನೋಡಿದ್ರೆ ನನ್ನ ಹಳೇ ಟೆಲಿಫೋನನ್ನೂ ಯಾರೋ ಹದಿನೈದು ಡಾಲರ್‌ಗೆ ತೊಗೊಂಡು ಹೋಗಿದ್ರು! ಖುಷಿಯಾಯ್ತು ಅನ್ನಿ!

ಅಲ್ಲಿ ನಮ್ಮೂರಲ್ಲಿ ಯಾಕೆ ನಾವು ಲೇಡೀಸ್ ಹಾಗೆ ಮಾಡೊಲ್ಲ? ವರ್ಷಾನು ಗಟ್ಲೆಯಿಂದ ಎಷ್ಟೋ ಹಳೇ ಸಾಮಾನು ಸೇರಿರತ್ವೆ. ಹೊಸದು ತೊಗೊಂಡ್ರೆ ಹಳೇದು ಮಾರೋಕೆ ಎಷ್ಟು ಕಷ್ಟ ಪಡ್ತೀವಿ! ಅಂಥಾ ಅಮೆರಿಕಾದಲ್ಲೇ ಪ್ರತಿ ಯೊಂದು ಗೃಹಿಣಿಯೂ ವರ್ಷಕ್ಕೊಮ್ಮೆ, ಬೇಡದ ಹಳೇ ಸಾಮಾನನ್ನು ಸುಲಭ ವಾಗಿ ಸಾಗಹಾಕ್ತಾಳೆ. ನಮಗೋ ಹಾಗೆ ಗ್ಯಾರೇಜು ಸೇಲೂಂತ ಹಾಕ್ಬಿಟ್ರೆ, ಅಕ್ಕ-ಪಕ್ಕದವರು ಆಡ್ಕೋತಾರೋ ಏನೋ, ಅನ್ನೋ ಕೆಟ್ಟ ಅನುಮಾನ. ಅಕ್ಕ-ಪಕ್ಕದವರಿಗೇನು ಬೇರೆ ಕೆಲಸವಿಲ್ವೆ? ನಮ್ಮದೇ ಅಂಥ ಊಹೆ ಅಷ್ಟೆ.

ಹೀಗೆ ಯೋಚ್ನೆ ಮಾಡ್ತಾಯಿರ್ಬೇಕಾದ್ರೆ, ನಮ್ಮ ಏರಿಯಾದಲ್ಲೇ ಒಂದು ಪರಮಾಶ್ಚರ್ಯ! ನಮ್ಮನೆ ಮುಂದಿನ ಬೀದಿ ಮಿಸೆಸ್ ಸುಂದರ್, ಗ್ಯಾರೇಜ್ ಸೇಲ್ ಹಾಕಿ ಬಿಟ್ರು! ನಂಬ್ತೀರಾ? ನಮ್ಮ ಏರಿಯಾದಲ್ಲೇ ಮೊದಲ ಸಲ! ಹೊಸ ಮನೆಗೆ ಹೋಗ್ತಾಯಿದ್ರು. ಅಷ್ಟು ಹಳೇ ಸಾಮಾನು ಗ್ಯಾರೇಜಿಗೆ ತುಂಬಿಸಿದ್ರು ಡೆಕನ್ ಹೆರಾಲ್ಡ್‌ನಲ್ಲಿ ಆರುನೂರು ರೂಪಾಯಿ ಖರ್ಚುಮಾಡಿ ಜಾಹೀರಾತು ಮಾಡಿದ್ರು—ಇಂಥಾ ದಿನ ಅಂತ. ನಮ್ಮ ಸೋದರತ್ತೆ ಮನೆ ಪಕ್ಕದ ಮನೆಯೋರು. ನನ್ನೂ ಕರೆದ್ರು. ಹೋದ್ರೆ ಮನೆ ಮುಂದೆ ಜನಜಂಗುಳಿ—ಕಾರುಗಳು.

ಗ್ಯಾರೇಜಿನಲ್ಲಿ ಮಿಸೆಸ್ ಸುಂದರ್, ತಮ್ಮ ಹಳೇ ಎವರೆಸ್ಟ್ ವಾಷಿಂಗ್ ಮೆಷಿನ್, ಗಾಡ್ರೆಜ್, ಫ್ರಿಡ್ಜ್, ಗೋಪಿ ಮಿಕ್ಸರ್, ಸಿನ್ನಿ ಫ್ಯಾನು, ವೆಟ್ ಗ್ರೈಂಡರ್ ಹಳೇ ಪೇಪರ್, ಸೀರೆಗಳು, ಫೋಟೋ ಫ್ರೇಮುಗಳು, ಸೈಕಲ್ಲು, ಎಲ್ಲಾ ಇಟ್ಟಿದ್ರು ನೀಟಾಗಿ ಲೇಬಲ್ ಮಾಡಿ.

ನಮ್ಮ ಸೋದರತ್ತೆಯದು ಒಂದು ಹಳೇ ಗೋದಿ ಹಿಟ್ಟು ಮಾಡೋ ಯಂತ್ರ ಇತ್ತು. ಅದನ್ನೂ ತಂದಿಟ್ರು.

ತೊಗೊಳ್ಳಿ! ಅದಕ್ಕೇ ಮೊದಲ ಸೇಲ್! ಎರಡು ಸಾವಿರ ರೂಪಾಯಿಕೊಟ್ಟು ಯಾರೋ ಸೇಟಮ್ಮ ಎತ್ಕೊಂಡು ಹೋದ್ರು.

ಸಂಜೆ ಎಂಟು ಗಂಟೆಯೊಳಗೆ ಹಳೇ ಹ್ಯಾಂಗರುಗಳನ್ನ ಬಿಟ್ರೆ - ಗ್ಯಾರೇಜು ಖಾಲಿ!

ಇದೊಳ್ಳೆ ಐಡಿಯಾ ಅಲ್ದೆ ಮತ್ತೇನು? ಇದರಲ್ಲೇನಿದೆ ಅವಮಾನ? ನನ್ನದೂ ಮೂವತ್ತು ವರ್ಷ ಸಂಸಾರದಲ್ಲಿ ವಾಷಿಂಗ್ ಮೆಷಿನ್, ಮಿಕ್ಸಿ, ಫ್ರಿಡ್ಜ್, ಬಾಯ್ಲರ್, ಎರಡು ಹಳೇ ಮಂಚ, ಎಲ್ಲಾ ಹಳೆಯದಾಗಿ, ಬದಲಾಯಿಸಲೇ ಬೇಕಾದ ಪರಿಸ್ಥಿತಿ ಬಂದಿತ್ತು ಹೋದ ವರ್ಷ. ಎಷ್ಟು ಕಷ್ಟ ಆಯ್ತು!

ನಮ್ಮ ಪಾತ್ರೆ ಸಾಮಾನಿನ ಪ್ಯಾರೇಜಾನನ್ನೇ ಅಮ್ಮಾ, ಅಯ್ಯಾ, ಅಂತ ಗೋಗರೆದು, ಅವನು ಡಜನ್ ಗಟ್ಲೆ ಗಿರಾಕಿಗಳನ್ನ ಕರಕೊಂಡು ಬಂದು ಕೊನೆಗೂ ಆರು ತಿಂಗಳಿಗೆ ಎಲ್ಲವನ್ನೂ ಸಾಗಹಾಕಿದೆ.

ಅದಕ್ಕೆ ಬದಲು ಹೀಗೊಂದು ಗ್ಯಾರೇಜ್ ಸೇಲ್ ಧೈರ್ಯವಾಗಿ ಮಾಡಿದ್ರೆ ಕೆಲ್ಸ ಎಷ್ಟು ಸುಲಭ ಆಗ್ತಿತ್ತು! ಅಲ್ವೆ?

ಅಂತೂ ನಾನೂ ನನ್ನ ಫ್ರೆಂಡ್ಸ್‌ಗೆಲ್ಲಾ ಧೈರ್ಯವಾಗಿ ಹೇಳ್ತಾ ಬರ್‍ತಾ ಇದೀನಿ. ಗ್ಯಾರೇಜ್ ಸೇಲ್ ಶುರುಮಾಡಿ. ಮೊದ್ಲು ನಾನು ಬರ್‍ತೀನಿ ಅಂತ. ಇನ್ನೊಂದು ವರ್ಷದಲ್ಲಿ ನಾನೂ ಗ್ರ್ಯಾಂಡ್ ಆಗಿ ಗ್ಯಾರೇಜ್ ಸೇಲ್ ಮಾಡ್ತಾ ಇದೀನಿ. ಎಲ್ಲರೂ ಬನ್ನಿ.

ಮಂತ್ರಿಕುವರ

ಗಂಟೆಗಟ್ಟಲೆ
ಭಾಷಣ ಬಿಗಿದು
ತಾನೇ ಉತ್ತಮ
ವಾಗ್ಮಿಯೆನಿಸಿ'
ನಿಮಿಷಾರ್ಧದಲಿ
ಬದಲಾಯಿಸಿ
ಕುರ್ಚಿ ನಾಲ್ಕೈದು
ಮಂತ್ರಿಕುವರ' ನೆಂದು
ರುಜುವಾತು ಪಡಿಸಿದ

ಹೆಚ್. ಗವಿಸಿದ್ದಯ್ಯ

21

ಕಿತಾಪತಿ ಕಿಟ್ಟೀ ಪಾರ್ಟಿ

ನಂದಿನಿ ಕಾಪಡಿ

"ಅದ್ಯಾಕ್ರೀ ಹಾಗೆ ದುರುಗುಟ್ಟಿಕೊಂಡು ನೋಡ್ತಿದೀರಿ? ಪಾಪ, ಗಂಡನನ್ನು ಆಫೀಸಿಗೆ ದಬ್ಬಿ, ಮಕ್ಕಳನ್ನು ಸ್ಕೂಲಿಗೆ ತಳ್ಳಿ ಪರಿಸ್ಥಿತಿ ಹಾಯಾದ ಮೇಲೆ ಮಹಿಳೆಯರು ಒಂದಾಗಿ, ಒಟ್ಟಾಗಿ ಕಿಟ್ಟೀ ಪಾರ್ಟಿಗಳನ್ನ ಮಾಡಿಕೊಂಡು ಕಾಲ ಕಳೆದರೆ ತಪ್ಪೇನ್ರಿ? ಕಿತಾಪತಿ ಅಂತೆ ಕಿತಾಪತಿ....ನೀವೆಲ್ಲಾ ಆಫೀಸಿನಲ್ಲಿ ಕಿತಾಪತಿ ಮಾಡೋದೇ ಇಲ್ವೇನ್ರಿ? ಬಾಸುಗಳ ಕುರ್ಚಿ ಕೆಳಗೆ ಬಾಂಬನ್ನು ಇಡೋದೇ ಇಲ್ವೇನ್ರಿ? ಸಹೋದ್ಯೋಗಿಗಳ ಕೋಟಿನ ಯಾ ಸೀರೆಯ ಸೆರಗಿನ ತುದಿಗೆ ಕುದುರೆ ಪಟಾಕಿ ಸರ ಸೇರಿಸಿ ಹಚ್ಚೋದೇ ಇಲ್ವೇನ್ರೀ? ಲಂಚ್ ಅವರ್ ಅಂತ ಹೇಳ್ಕೊಂಡು ಇಸ್ಪೀಟು ಆಡಿಕೊಂಡು ಜೂಜು ಆಡೋದೇ ಇಲ್ವೋ? ಅವೇ ಆಗ್ಬೋಯ್ತು, ಹೆಂಗಸರಿಗೊಂದು, ಗಂಡಸರಿಗೊಂದು ಅಂತ ಚಾರಿತ್ರ್ಯ ಇದೆಯೋ?"

"ಅಯ್ಯೋ ದೇವರೇ ... ನನ್ನನ್ನು ಕಿವುಡನನ್ನಾದರೂ ಮಾಡಪ್ಪಾ" ಅಂತ ದೇವರಲ್ಲಿ ಮೊರೆಯಿಟ್ಟ ನಮ್ಮ ದೇವರಾಜ್, ಪತ್ನಿ ಪವಿತ್ರಾಳ ನೇರ ಹಿಡಿತಕ್ಕೆ ಸಿಕ್ಕಿ ...

ಆಗಿದ್ದು ಇಷ್ಟೇ. ಮುಂದಿನವಾರ ಪವಿತ್ರಾಳ ಮನೆಯಲ್ಲಿ ಕಿಟ್ಟೀ ಪಾರ್ಟಿ ನಡೆಯುವುದಿತ್ತು. ಕಿಟ್ಟಿಗೆ ಹಾಕಬೇಕಾದ ಮಾಮೂಲು ಐನೂರು ರೂ ಜೊತೆಗೆ ಹದಿನೈದು ಹೆಂಗಳೆಯರಿಗೆ ಪಾರ್ಟಿಗೆಂದು ಇನ್ನೊಂದೈನೂರು ಕೇಳಿದ್ದಳು ಪತ್ನಿ. "ವನಜಾ ಬರೀ ವಾಂಗೀಭಾತು ಮಾಡಿದ್ದಳು. ಜಲಜಾ ಬರೀ ಜಿಲೇಬಿ, ಖಾರದವಲಕ್ಕಿ ಮುಗಿಸಿದಳು, ಪಂಕಜಾ ಪಕೋಡಾ ಜೊತೆಗೆ ಪಂಜಾಬೀ ಮಿಠಾಯಿ ಯನ್ನೂ ತರಿಸಿದ್ದಳು. ನೀರಜಾ ನಾನ್ ರೊಟ್ಟಿಯೊಂದಿಗೆ ಪಾಲಕ್ ಪನೀರ್ ಮತ್ತು ಕೋಫ್ತಾ ಮಾಡಿ, ಐಸ್‌ಕ್ರೀಂ ತರಿಸಿದ್ದಳು. ಸುಮಿತ್ರಾ ಸೋರೆಕಾಯಿ ಹಲ್ವಾ ಮತ್ತು ಸಿಹಿ–ಹುಳಿಯ ಚೈನೀಸ್ ವ್ಯಂಜನ ಮಾಡಿದ್ದಳು......."ಹೀಗೆ ಗಾಡಿ ಓಡುತ್ತಲೇ ಇತ್ತು. ಕಡೆಯವಳ ಹೆಸರಿಗೆ ನಾಲ್ಕೈದು ವ್ಯಂಜನಗಳು ಅಂಟಿ ಕೊಂಡು ವನಜಾಳ "ಬರೀ ವಾಂಗೀಭಾತ"ನ್ನು ಪೂರ್ತಿ ಕೆಳಕ್ಕೆ ತಳ್ಳಿದ್ದವು.

"ನಾನು ಮೊನ್ನೆ 'ಹೊಸರುಚಿ'ಯಲ್ಲಿ ಓದಿದ್ದ ಗುಜರಾತಿ ಢೋಕಲಾ, ಕೇರಳದ ಪುಟ್ಟು, ಬೆಂಗಾಲಿಗಳ ರಸಗುಲ್ಲಾ, ಮಹಾರಾಷ್ಟ್ರದ ಶ್ರೀಖಂಡ್ ಮಾಡಿ ನಮ್ಮ ಮೈಸೂರಿನವೇ ಆದ ಬಿಸಿ ಬಿಸಿ ಗಸಗಸೆ ಪಾಯಸ ಮಾಡಿಬಿಡ್ತೀನಿ ಕಣ್ರೀ. ಎಲ್ಲರೂ ಅಪಮಾನದಿಂದ ತಲೆತಗ್ಗಿಸಬೇಕು." ಎಂದಳು ಪವಿತ್ರಾ.

"ಸರಿ, ನಾನೂ ಈ ಭಾರದಿಂದ ಬೆನ್ನು ತಗ್ಗಿಸಬೇಕು" ಎಂದುಕೊಂಡ ದೇವರಾಜ್.

ಪತ್ನಿಗೆ ಸಾವಿರ ರೂಗಳನ್ನು ಕೊಟ್ಟು ಟಿ.ವಿ. ಯಲ್ಲಿ ಬರುತ್ತಿದ್ದ ಕ್ರಿಕೆಟ್ ಮ್ಯಾಚ್ ನೋಡಲು ಹೋದ. ಹತ್ತೇ ನಿಮಿಷಗಳಲ್ಲಿ ಬಿಸಿ ಬಿಸಿ ಢೋಕಲ್, ಕೊತ್ತಂಬರಿ ಸೊಪ್ಪಿನ ಚಟ್ನಿ ಹಿಡಿದುಕೊಂಡು ಬಂದಳು ಪತ್ನಿ. "ಹೇಗಿದೇರಿ ಎಲ್ಲಾ ಜನರ ಮುಂದೆ ಹೆಚ್ಚೂ ಕಮ್ಮಿ ಆಗಬಾರದು ಎಂದು ಇವತ್ತಿಂದಲೇ ಮಾಡು ತ್ತಿದ್ದೇನೆ" ಎಂದಳು. ಸ್ಪಂಜಿನಂತಿದ್ದ ಢೋಕಲಾ, ಹದವಾಗಿ ನಾಲಿಗೆಗೆ ಚುರು ಚುರು ಎನಿಸುತ್ತಿದ್ದ ಚಟ್ನಿ ತಿಂದು ಮೆತ್ತಗಾದ ದೇವರಾಜ್.

"ಅಲ್ಲಾ ಪವೀ... ಈ ಕಿಟ್ಟಿ ಪಾರ್ಟಿಗಳ ಹಿಂದಿನ ಅರ್ಥವೇ ಗೊತ್ತಾಗೋ ದಿಲ್ವಲ್ಲಾ" ಎಂದ.

"ಯಾಕ್ರೀ ಅರ್ಥವಿಲ್ಲ? ಈಗ ನೋಡಿ ನಮ್ಮ ಗುಂಪಿನಲ್ಲಿ ಹದಿನೈದು ಜನ ರಿದ್ದೇವೆ. ಒಬ್ಬೊಬ್ಬರೂ ತಿಂಗಳಿಗೆ ಐನೂರು ರೂ. ಹಾಕುತ್ತಾರೆ. ಒಟ್ಟು ಹದಿನೈದು ತಿಂಗಳು ಒಂದು ಕಿಟ್ಟಿ ನಡೆಯುತ್ತದೆ. ಎಲ್ಲರ ಹೆಸರುಗಳನ್ನು ಚೀಟಿ ಗಳಲ್ಲಿ ಬರೆದು, ಒಂದು ಚೀಟಿ ಎತ್ತುತ್ತೇವೆ. ಅದರಲ್ಲಿರುವ ಹೆಸರಿನವಳಿಗೆ 500X15 ಅಥವಾ ಏಳು ಸಾವಿರದ ಐನೂರು ಬರುತ್ತದೆ. ಮಿಕ್ಕಿದ್ದವರು ಪ್ರತಿ ತಿಂಗಳೂ ತಮ್ಮ ಹೆಸರಿಗೆ ಕಾಯುತ್ತಾರೆ.

ಈಗ ನೋಡಿ, ಮೀನಾಕ್ಷಿಗೆ ಮಿಕ್ಸೀ ಬೇಕಿತ್ತು. ಮೊದಲನೇ ಹಂತಿನಲ್ಲೇ ಅವಳ ಹೆಸರು ಬಂತು. ಮಿಕ್ಸೀ ಜೊತೆ ದೇವರ ಮಂಟಪವನ್ನೂ ಖರೀದಿಸಿದಳು. ವನಜಾ ಮಗಳಿಗೆ ಕೆಂಪಿನ ಓಲೆ–ಜುಮುಕಿ ಮಾಡಿಸಿದಳು. ನೀರಜಾ ಹೊಸ ಸೋಫಾ ಸೆಟ್ ತೆಗೆದಿಟ್ಟಳು. ಆದೇ ನಮ್ಮ ಸಾವಿತ್ರಿ ನೋಡಿ, ಅವಳ ಗಂಡ

ಫಾಟಿ ಕಣ್ರೀ. ಬಂದ ದುಡ್ಡನ್ನೆಲ್ಲಾ ಶೇರಿಗೆ ಹಾಕಿದನಂತೆ. ಆ ದಿನಗಳು ಹರ್ಷದ್ ಮೆಹ್ತಾ ಮೆರೆಯುತ್ತಿದ್ದ ದಿನಗಳು ನೋಡಿ. ಮೂರೇ ತಿಂಗಳಲ್ಲಿ ಆ ಏಳು ಸಾವಿರದ ಐನೂರನ್ನು ನಾಲ್ಕು ಪಟ್ಟು ಹೆಚ್ಚಿಸಿಕೊಂಡ.

ನಮ್ಮ ಹಣೇ ಬರಹಕ್ಕೆ ಇನ್ನೂ ಒಂದುಸಲವಾದರೂ ಬಂದಿಲ್ಲ ನೋಡಿ. ಈಗಾಗಲೇ ಹತ್ತು ಕಂತುಗಳನ್ನು ಕಟ್ಟಿದ್ದಾಯ್ತು" ಎಂದು ಕೊರಗಿದಳು ಪವಿತ್ರಾ.

ಪತಿಯ ಮನ ಕರಗಿ ಹೋಯ್ತು. "ಅಲ್ವೇ ಪವೀ. ನಿಂಗೆ ಈ ಸಲ ಬಂದ್ರೆ ಏನ್ಮಾಡ್ತೀಯಾ" ಎಂದೆ

"ಮಂಜುಳನ ಕಿವಿ ರಿಂಗು ಕಿತ್ತು ಹೋಗಿದೇರೀ. ಅವಳಿಗೂ ವಾಲೆನೇ ಮಾಡಿಸಬಹುದು. ಆಮೇಲೆ ನನಗೆ ಒಳ್ಳೇ ಕಾಂಜೀವರಂ ಸೀರೆ ಬೇಕು" ಎಂದಳು ಪವಿತ್ರ.

"ಪವೀ ನೋಡಿಲ್ಲಿ, ಈ ಸಲ ನಿನಗೇನಾದರೂ ಬಂದರೆ ಆ ಹಣ ನನಗೆ ಕೊಡು. ಎರಡೇ ತಿಂಗಳಲ್ಲಿ ನಾನೂ ನಿನಗೆ ಬಡ್ಡಿ ಸಮೇತ ಹಿಂತಿರುಗಿಸ್ತೇನೆ" ಎಂದ. ಪತಿರಾಯ. ಅವನ ಮನಸ್ಸಲ್ಲಿ ಗೆಳೆಯ ಸೆಲ್ವಂ ಮತ್ತು ಮುತ್ತುಸ್ವಾಮಿಗೆ ತಲಾ ಮೂರು ಮೂರು ಸಾವಿರದಂತೆ ಸಾಲ ಕೊಡುವುದು. ಉಳಿದ ಸಾವಿರದ ಐನೂರನ್ನು ದೊಡ್ಡಾಟಕ್ಕೇ ಹಾಕಿ ಬಿಡೋದು. ದೊಡ್ಡಾಟದಲ್ಲಿ ಗೆದ್ದರೆ ಜಾಕ್‌ಪಾಟ್ ಸೋತರೆ ಸೆಲ್ವಂ ಮತ್ತು ಮುತ್ತು ಕೊಡುವ ಬಡ್ಡಿಯಂತೂ ಇದ್ದೇ ಇರುತ್ತದೆ. ಹೀಗೇ ಒಟ್ಟಿನಲ್ಲಿ ಅಸಲಿಗೆ ಮೋಸವಿಲ್ಲ. ಹೀಗೆ ನಾನಾ ತರಹ ಯೋಚನೆಗಳು.

ಪವಿತ್ರಾ ಪತಿಯತ್ತ ನೋಡಿದಳು. ಒಂದು ತರಹಾ ನೋಟ ಅದು... ದೇವರಾಜ್‌ನ ಮುಗುಳ್ನಗೆ ಎರಡೇ ಸೆಕೆಂಡುಗಳಲ್ಲಿ ಮಾಯವಾಯ್ತು !

"ಯಾಕೆ ಪವೀ ನನ್ಮೇಲೆ ಸಂಶಯಾನಾ ?" ಎಂದ.

"ಹಾಗೇನೂ ಇಲ್ಲಾರೀ" ಎನ್ನುತ್ತಾ ಪವಿತ್ರಾ ಒಳಗೆ ಹೋದಳು. "ಸದ್ಯ ಹಣ ಕೊಡೋದಿಲ್ಲ ಅಂತ ಹೇಳಲಿಲ್ಲವಲ್ಲಾ, ಅಷ್ಟೇ ಸಾಕು" ಎಂದುಕೊಂಡ ದೇವರಾಜ್.

ಕಿಟ್ಟೀ ಪಾರ್ಟಿಯ ದಿನ ಬಂದೇ ಬಿಡ್ತು. ಬೆಳಗ್ಗೆ ದೇವರಾಜ್ ಏಳೋ ಹೊತ್ತಿಗೆ ಮನೆಯ ಸ್ವರೂಪವೇ ಬದಲಾಗಿ ಬಿಟ್ಟಿದೆ. ಎಲ್ಲೆಲ್ಲಿಂದಲೋ ಪವಿತ್ರಾ ವಸ್ತುಗಳನ್ನು ಜಮಾಯಿಸಿಬಿಟ್ಟಿದ್ದಳು. ಆ ಮಣ್ಣಿನ ಬೊಂಬೆಗಳೇನು ? ಶಿಲಾ ಬಾಲಿಕೆಯ ಮೂರ್ತಿಗಳೇನು ?

ಖಮನ್ ಢೋಕಲಾ, ಪುಟ್ಟು, ರಸಗುಲ್ಲಾ ಶ್ರೀಖಂಡ್‌ಗಳು ಒಂದು ಕಡೆಗಾದರೆ, ಬಿಸಿಬಿಸಿ ಗಸಗಸೆ ಪಾಯಸದ ಘಮ ಇನ್ನೊಂದು ಕಡೆ. "ಇವಳಿಗೇನಾದ್ರೂ ಕಿಟ್ಟಿ ಬಂದರೆ ನನ್ನ ಜ್ಯಾಕ್ ಪಾಟ್" ಎಂದು ಕೊಂಡ. ಪವಿತ್ರಾ ನಗುತ್ತಲೇ ಅವನನ್ನು ಬೀಳ್ಕೊಟ್ಟಳು.

ಸಂಜೆ ಜ್ಯಾಕ್‌ಪಾಟಿನ ಗುಂಗಿನಲ್ಲೇ ಬೇಗ ಮನೆಗೆ ಬಂದ ದೇವರಾಜ್. ಎಲ್ಲಾ ಹೆಂಗಸರೂ ಹೋಗಿ ಮನೆ ಶಾಂತವಾಗಿತ್ತು. ಪವಿತ್ರಾ ಅವನನ್ನು ಹೊರಗಡೆಯೇ ಸ್ವಾಗತಿಸಿದಳು. "ರೀ, ನಿಮ್ಮ ಮಾತು ನಿಜವಾಯ್ತು. ಈ ಸಲ ಕಿಟ್ಟಿ ನನಗೇ ಬಂತು" ಎಂದಳು ನಗು ನಗುತ್ತಾ. ದೇವರಾಜ್ ನಿಜವಾಗಿಯೂ ತಾನು ಇಂದ್ರನೇ ಆಗಿಬಿಟ್ಟಿದ್ದೇನೆ ಎಂದು ಕೊಂಡು ಒಳಗೆ ಹೋದ. ಪಡಸಾಲೆಯಲ್ಲಿ ಒಳ್ಳೇ ಕರೀ ಮರದ ಸೋಫಾಸೆಟ್ ಕೂತಿತ್ತು. ಅದಕ್ಕೆ ಹೊಂದುವಂತೆ ನೆಲಕ್ಕೆ ದಟ್ಟ ಕೆಂಪಿನ ಮೆತ್ತಗಿನ ರತ್ನಗಂಬಳಿ !

"ರೀ ನನಗೆ ಬರುವ ಕಿಟ್ಟಿಯ ಯೋಚನೆಯಿಂದ ಇವೆರಡನ್ನೂ ಮೊದಲೇ ಆರ್ಡರ್ ಮಾಡಿದ್ದೆ. ಎರಡೂ ಸೇರಿ ಬರೀ ಒಂಬತ್ತು ಸಾವಿರ ಕಣ್ರೀ. ಅಂಗಡಿಯವನು ಸಾವಿರದ್ದೈನೂರನ್ನು ಕಂತಿನಲ್ಲಿ ಕೊಡಿ ಪರವಾಗಿಲ್ಲ ಎಂದ. ಆ ವನಜಾ, ಜಲಜಾ, ಸುಮಿತ್ರಾ ಎಲ್ಲರ ಮುಖ ಹೇಗಾಯಿತು ಅಂತೀರಾ ? ಬರೀ ತಮಗೇ ಎಲ್ಲಾ ಸಂಪತ್ತು ಅಂದುಕೊಂಡಿದ್ದರು. ಇವತ್ತು ನಮ್ಮ ಮನೆ ಮತ್ತು ನನ್ನ ಅಡಿಗೆ ನೋಡಿ ಬೆರಗಾಗಿ ಹೋದ್ರು" ಎಂದು ಹೇಳುತ್ತಲೇ ಇದ್ದಳು ಪತ್ನಿ. ಕೇಳುತ್ತಲೇ ಇದ್ದ ಪತಿ.

ಹಾದಿಯಲ್ಲಿ ಕೇಳಿಸಿದ್ದು :

ಶ್ರೀರಾಮಚಂದ್ರ ಅಯೋಧ್ಯೆಗೆ ಹಿಂತಿರುಗಿದ ಮೇಲೆ ಸುಗ್ರೀವ ಸುಖವಾಗಿ ರಾಜ್ಯಭಾರ ಮಾಡ್ಕೊಂಡಿದ್ದ ಅಂತ ಯಾವ ಖಾತ್ರಿರೀ. ಈಗಿರೋಹಾಗೆ ಆಗ್ಲೂನೂ ಹನುಮಂತ ಭಿನ್ನಮತೀಯನಾಗಿ ಸುಗ್ರೀವನ್ನ ಗೋಳುಹುಯ್ಕೊಂಡಿರ್ಬೋದಲ್ಲವೇ !

25

ತಿರುಕನ ಕನಸು

ವೈ. ಎಸ್. ಕೃಷ್ಣಮೂರ್ತಿ

ತಿರುಕನೋರ್ವನೂರ ಮುಂದೆ
ಮುರುಕುಧರ್ಮ ಶಾಲೆಯಲ್ಲಿ
ಒರಗಿ ಕುಳಿತ ಸಮಯದಲ್ಲಿ
ಬಂದರೆಲ್ಲರೂ ॥

ಗಾಂಧಿ ಟೋಪಿ ತಲೆಯ ಮೇಲೆ
ಖಾದಿ ಜುಬ್ಬಾ ಮೈಯ ಮೇಲೆ
ಕೈಯ ಮುಗಿದು ಹಲ್ಲು ಕಿಸಿದು
ಬಂದರೆಲ್ಲರೂ ॥

ಕೈಯ ಮುಗಿದು ನಿನ್ನ ಓಟು
ನಮಗೆ ಕೊಡು ಎಂದು ಕೇಳಿ
ಅಂಗಲಾಚಿ ಇವನನ್ನು
ಬೇಡುತ್ತಿದ್ದರು ॥

ಈ ಮುರುಕುಧರ್ಮ ಶಾಲೆ
ಒಡೆಯನಿದಕೆ ನೀನೆ ಮುಂದೆ
ಇಲ್ಲಿ ಅರಮನೆಯ ನಿನಗೆ
ಕಟ್ಟಿ ಕೊಡುವೆವು ॥

ನೀನೆ ಮುಂದೆ ರಾಜನಿದಕೆ
ನಿನಗೆ ಪಟ್ಟ ಕಟ್ಟಿ ನಾವು
ನಿನ್ನ ಮುಂದೆ ಜೀಯಾ ಎಂದು
ನಿಂತು ಬಿಡುವೆವು ॥

ಎಂದು ಹೊಗಳಿ ಹೊಗಳಿ ಇವನ
ನಿನ್ನ ಸಮರಿಲ್ಲವೆಂದು
ಅಟ್ಟಕ್ಕೆಟ್ಟು ಇವನಿಗೊಂದ
ಕನಸಕೊಟ್ಟರು ॥

ಓಟು ಕೊಡುವ ದಿನವು ಬಂತು
ಓಟು ಕೊಟ್ಟು ಬಂದ ತಿರುಕ
ಮುರುಕು ಧರ್ಮ ಶಾಲೆಯತ್ತ ಹಗಲು ಇರುಳು
ನೋಡುತ್ತಿದ್ದ ಕನಸುಕಾಣುತ॥


ಕನಸಿನಲ್ಲಿ ನಮ್ಮ ತಿರುಕ
ರಾಜನಂತೆ ಮೆರೆಯುತ್ತಿದ್ದ
ಪಕ್ಕದಲ್ಲಿ ಸುಂದರಿ
ರಾಣಿಯಿದ್ದಳು॥

ಭೇರಿಯಂಥ ಸದ್ದು ಕೇಳಿ
ಗಡಬಡಿಸಿ ಎದ್ದ ತಿರುಕ
ಕಂಡ ದೃಶ್ಯದಿಂದ ಇವನು
ಗೋಳಾಡಿದ ॥

ಕೈಯ ಮುಗಿದು ಓಟು ಪಡೆದು
ಕನಸು ಕೊಟ್ಟ ಅದೇ ಜನ
ತಿರುಕನನ್ನು ನನಸಿನಲ್ಲಿ
ಅಟ್ಟುತ್ತಿದ್ದರು ॥

ಬುಲ್‌ಡೋಜರ್‌ಅನ್ನು ತಂದು
ಮುರುಕುಧರ್ಮ ಶಾಲೆಯನ್ನ
ನೆಲದ ಮಟ್ಟ ಕೆಡವಿ ಹಾಕಿ
ತಿರುಕನನ್ನು ಬೀದಿಗೆಳೆದು ತಳ್ಳಿಬಿಟ್ಟರು॥

ಇತ್ತ ಮುರುಕು ಧರ್ಮ ಶಾಲೆ
ಅತ್ತ ಅರಮನೆಯೂ ಇಲ್ಲ
ಬೀದಿ ಬದಿಗೆ ಬಿದ್ದ ತಿರುಕ
ಎಂದಿನಂತೆ ಭಿಕ್ಷೆಯನ್ನು ಬೇಡುತ್ತಿದ್ದನು ॥



ಇದು..

ಚಂದ್ರು




ಮತ್ತೆ ಇದು.



ಹಾಗೂ ಇದು....



ಮತ್ತೆ ಇದು......



ಇದರ ಜೊತೆಗೆ ___



ಇಂಗಾಗಿದ್ದ ಗೃಹಿಣಿಯರು ಆದರ್ಶರು ಅಲ್ಲವೇ||

ಕುಹಕೋಪದೇಶದ ಫಲ

ರಾಮಿ

ತನ್ನ ಉಪದೇಶ ತನಗೇ ತಿರುಗುಬಾಣವಾಗತ್ತೆ ಅಂತ ಪ್ರಾಣೇಶ ಕನಸಿನಲ್ಲೂ ಎಣಿಸಿರಲಿಲ್ಲ.

ಬುಳ್ಳಾಪುರಕ್ಕೆ ಹೋದರೆ ಅಲ್ಲಿನ ಸಿನಿಮಾ ಹೋಟಲು ಹೊಕ್ಕು ಇಡ್ಲಿ ತೋವೆ ಕಾಫಿ ಬಸಿದುಕೊಂಡು ಬಂದರೇನೆ ಅವನಿಗೆ ಸಮಾಧಾನ. ಇಡ್ಲಿ ಜೊತೆಗೆ ಬೂಸಾ ಚಟ್ನಿ ಅಥವಾ ಸಾರಿನಂಥ ಸಾಂಬಾರ್ ಕೊಡೋದರ ಬದಲಾಗಿ ಸೊಗಸಾದ ತೊಗರಿಬೇಳೆ ತೋವೆಯನ್ನು ಬಟ್ಟಲು ತುಂಬ ಕೊಡುವ ಹೋಟಲೆಂದರೆ, ಈ ಪ್ರಾಂತದಲ್ಲಿ ಶಂಕರಪ್ಪನದು ಮಾತ್ರ. ಹೊಂಬಣ್ಣದ ತೋವೆಯಲ್ಲಿ ಮೃದು ಮಧುರ ಇಡ್ಲಿ ದ್ವಯಗಳು ತೇಲುವ ಸೊಬಗನ್ನು ವರ್ಣಿಸಿ ಬುಳ್ಳಾಪುರದ ಕವಿರತ್ನ ಕೇಶವಯ್ಯ ಒಂದು ಕವಿತೆಯನ್ನೇ ಕೊರೆದು ಬಿಟ್ಟಿದ್ದಾನೆ.

ಸಿನಿಮಾ ಹೋಟೆಲ್ ಮಾಲೀಕ ಶಂಕರಪ್ಪ ಪ್ರಾಣೇಶನಿಗೆ ಮೊದಲಿಂದಲೂ ಗೊತ್ತು. ಘರಮಾಯಿಶಿ ಡಿಕಾಕ್ಷನ್ ಕಾಫಿಯನ್ನು ಸ್ವಹಸ್ತದಿಂದ ತಂದು ನೀಡುತ್ತಿದ್ದ ಆ ಆತ್ಮೀಯತೆಯನ್ನು ಪ್ರಾಣೇಶ್ ಮರೆತಾನೆಯೆ ?

ಯಾವತ್ತೊ ಒಮ್ಮೆ ಅಮೃತ ಸದೃಶವಾದ ಕಾಫಿಗೆ ಪ್ರಶಂಸೆ ಸಲ್ಲಿಸುತ್ತಾ ಶಂಕರಪ್ಪನಿಗೆ ಒಂದು ಸಲಹೆ ನೀಡಿದ. ನಿಮ್ಮ ಇಡ್ಲಿ, ತೋವೆ, ಕಾಫಿ ಎಲ್ಲಾ ಸರಿ. ಆದರೆ ನಿಮ್ಮ ಹೋಟಲನ್ನು ಕೊಂಚ ಅಪ್ ಟು ಡೇಟ್ ಮಾಡಬೇಕು ಎಂದು ಸೂಚಿಸಿದ ಪ್ರಾಣೇಶ. ಬೆಲೆ ಸ್ವಲ್ಪ ಏರಿಸಿದರೂ ಚಿಂತೆಯಿಲ್ಲ ಎಂದು ಬೇರೆ ಸೇರಿಸಿದ. ಅದು ಬಿಟ್ಟು ಓಬೀರಾಯನ ಕಾಲದ ವಾತಾವರಣ ಇಟ್ಟು ಕೊಂಡು ಒಳ್ಳೊಳ್ಳೆ ತಿಂಡಿ ತೀರ್ಥ ಅಗ್ಗವಾಗಿ ಕೊಟ್ಟರೂ ಪ್ರಯೋಜನವಿಲ್ಲ ಈಗಿನ ಕಾಲದಲ್ಲಿ ಅಗ್ಗವೆಂದರೆ ಹಗ್ಗವೇ. ಅದ್ದೂರಿಯಲ್ಲಿ ನಾಜೂಕಾಗಿ ಒದಗಿಸಿದರೆ ನರಕದ ಬಾಬ್ತುಗಳನ್ನಾದರೂ ನಾಲ್ಕು ಪಟ್ಟು ಹಣಕೊಟ್ಟು ನೆಕ್ಕುತ್ತಾರೆ ಆಧುನಿಕರು ಎಂಬ ಸತ್ಯವನ್ನು ಶಂಕರಪ್ಪನಿಗೆ ಮನದಟ್ಟು ಮಾಡಲು ಯತ್ನಿಸಿದ. ಈ ದಿನ

ಗಳಲ್ಲಿ ದುಬಾರಿ ತೆತ್ತರೇ ಜನರಿಗೆ ಸಮಾಧಾನ. ನ್ಯಾಯಬೆಲೆಗೆ ನೀಡಿದರೆ ವಸ್ತು ವಿನ ಗುಣ ಅಪ್ಪಕ್ಕಷ್ಟೆ ಎಂದು ಜನ ಭಾವಿಸುವ ಕಾಲವಿದು ಎಂದೆಲ್ಲ ಉಪದೇಶಿಸಿದ.

ಶಂಕರಪ್ಪನಿಗೆ ಒಮ್ಮೆಗೆ ಹೌದೆನಿಸಿತು. ಅವನ ಮಕ್ಕಳು ಕೂಡ ಹಾಗೇನೇ ಹೇಳ್ತಾ ಇದ್ದರು. ಆದರೆ ಫ್ಯಾಶನ್ ಗೀಶನ್ ಮಾಡಿ ರೇಟು ಏರಿಸಿದರೆ ಪಾಪದ ಜನಗಳಿಗೆ ಕಷ್ಟವಾಗುತ್ತಲ್ಲ ಅಂತ ಅವರ ಆತಂಕ.

ಅಯ್ಯೋ ನೀವು ಯಾವ ಕಾಲದಲ್ಲಿದ್ದೀರ ಶಂಕ್ರಪ್ನೋರೆ ... ದೇಶದ ಉದ್ಧಾರ ಮಾಡ್ತೀವಿ ಅಂತ ಹೊರಟಿರೋ ಮಂದಿಯೇ ನೀವು ಹೇಳೋ ಪಾಪದ ಜನಗಳ ಉಸಾಬರಿ ಇಲ್ದೇನೇ, ಜೋರಾಗಿರೋ ಜನಗಳನ್ನ ಪಳಗಿಸೋದರಲ್ಲಿ ನಿರತರಾಗಿ ದ್ದಾರೆ ಅಂದ ಮೇಲೆ ನೀವ್ಯಾತಕ್ಕೆ ಹೀಗೆ ಅಂತ ಛೇಡಿಸಿ ಬಂದಿದ್ದ ಪ್ರಾಣೇಶ.

ಗೀತೋಪದೇಶದಿಂದ ಪಾರ್ಥ ಹೋರಾಟ ಮುಂದುವರಿಸಿದರೆ ಪ್ರಾಣೇಶನ ಕುಹಕೋಪದೇಶದಿಂದ ಶಂಕಂಪ್ಪ ಹೋಟೆಲ್ ಸನ್ಯಾಸತೆಗೆದುಕೊಂಡರು. ಮಕ್ಕಳ ಒತ್ತಾಯದಿಂದ ತುಳಸೀ ವ್ಯವಸಾಯಕ್ಕೆ ತೊಡಗಿದರು.

ಇನ್ನೊಮ್ಮೆ ಪ್ರಾಣೇಶ್ ಬುಳ್ಳಾಪುರಕ್ಕೆ ಹೋದಾಗ ಸಿನಿಮಾ ಹೋಟಲಿಗೂ ಹೋಗಿದ್ದ. ಇಡಿಯ ಕಟ್ಟಡ ಎಷ್ಟು ಬದಲಾಯಿಸಿತ್ತೆಂದರೆ ಪ್ರಾಣೇಶನಿಗೆ ಗುರುತಿಸೋದಕ್ಕೇ ಸಾಧ್ಯವಾಗಲಿಲ್ಲ ಹಿಂದಿನ ಜಕ್ರಿ ಫರ್ನಿಚರ್ ಲೋಟ ತಟ್ಟೆ ಎಲ್ಲ ಮಾಯವಾಗಿದ್ದವು ಹೋಗಿ ಕೂತ ಕೂಡಲೆ ಏನ್ ಕೊಡ್ಲಿ ಸಾರ್, ಎಂಬ ನಯ ವಿನಯದ ವಿಚಾರಣೆಯ ಬದಲಿಗೆ ಮೆನು ಕಾರ್ಡ್ ಮುಂದೆ ಬಂದು ಕೂತಿತು ಎಂದು ತಿಳಿಸಿದರೆ ಉಳಿದದ್ದೆಲ್ಲ ಹೇಗಿತ್ತು ಅಂತ ಅರ್ಥವಾಗುತ್ತಲ್ಲ !

ಪ್ರಾಣೇಶ ಮೊದಲಿನಂತೆ ಪುಷ್ಕಳ ತುಂಬಿಸಿಕೊಳ್ಳೋದಕ್ಕೂ ಹೆದರಿದ. ಆದರೂ ಬಿಲ್ಲು ಇಪ್ಪತ್ತೆಂಟು ಐವತ್ತು.

ತನ್ನ ಉಪದೇಶವನ್ನು ಶಂಕರಪ್ಪನ ಮಕ್ಕಳು ಈ ಮಾದರಿಯಲ್ಲಿ ಅನುಸರಿಸಿ ಯಾರೆಂದು ಪ್ರಾಣೇಶನಿಗೇನು ಕನಸೆ ?

ಚುನಾವಣಾ ಪ್ರಣಾಲಿಕೆ

ಕುಮುದಾ ಪುರುಷೋತ್ತಮ್

ಹಿಂದೊಂದು ಕಾಲವಿತ್ತು. ಸ್ವರ್ಣಯುಗ–ಸಂವಿಧಾನದಲ್ಲಿ ನಮೂದಿಸಿದ್ದಂತೆ ಐದು ವರ್ಷಕ್ಕೊಮ್ಮೆ ನಡೆಯುವ ಅಪರೂಪದ ಚುನಾವಣೆಗಳು. ಆಳುವ ಪಕ್ಷ ಐದು ವರ್ಷಗಳ ಸುದೀರ್ಘ ಆಡಳಿತ ನಡೆಸಿದರೆ ವಿರೋಧ ಪಕ್ಷಗಳು ಆಡಳಿತದ ಅಂಕುಡೊಂಕುಗಳನ್ನು ತೋರಿಸಿ ಅದು ಅಧಿಕಾರದ ಹಮ್ಮಿನಲ್ಲಿ ಹದ್ದು ಮೀರದಂತೆ ನೋಡಿಕೊಳ್ಳುತ್ತಾ ತನ್ನ ಕರ್ತವ್ಯ ಮಾಡುತ್ತಿದ್ದ ಕಾಲ. ಆರಿಸಿ ಬಂದ ಪಕ್ಷ ಆನೆ ಸೈಜಿನ ಮಂತ್ರಿ ಮಂಡಲ ರಚಿಸುವುದು. ಪದವಿ ದೊರಕದಿದ್ದಲ್ಲಿ ಭಿನ್ನಮತೀಯ ರಾಗಿ ನಾಯಕನನ್ನುರುಳಿಸಲು ಕಂಕಣಬದ್ಧರಾಗುವುದು, ಶಾಸನ ಸಭೆಯಲ್ಲಿ ಎಂತಹ ಕಾರ್ಯವೂ ನಡೆಯದಂತೆ ಹುಯಿಲೆಬ್ಬಿಸುವ ಮತ್ತು ಕುಳಿತಲ್ಲಿ ನಿಂತಲ್ಲಿ ಅವಿಶ್ವಾಸ ನಿರ್ಣಯ ತರುವ ವಿರೋಧ ಪಕ್ಷ, ಅಧಿಕಾರ ವಹಿಸಿ ದಿನ ಒಂದರಿಂದ ಕುರ್ಚಿ ಯಲ್ಲಿರಲು ಪಾತಾಳಗರಡಿ ಹಾಕಿ ಸರ್ಕಸ್ಸು ನಡೆಸುವ ಮಂತ್ರಿ ಮಂಡಳಿ ಇವೆಲ್ಲಾ ಆ ಸ್ವರ್ಣಯುಗದಲ್ಲಿರಲಿಲ್ಲ. ಸರಿಯೋ ತಪ್ಪೋ ಆಡಳಿತ ನಡೆಯುತ್ತಿತ್ತು. ಆಡಳಿತವೇ ಸ್ಥಗಿತಗೊಂಡು ನಿಸ್ತ್ರಾಣಿಯಾಗುತ್ತಿರಲಿಲ್ಲ.

ಹಿಂದೆಲ್ಲಾ ಚುನಾವಣೆ ಬಂತೆಂದರೆ ನಾವು, ಮಕ್ಕಳಿಗೆಲ್ಲಾ ಇನ್ನಿಲ್ಲದ ಉತ್ಸಾಹ. ಪುಟಿಯುವಿಕೆ. ಚುನಾವಣಾ ಮೆರವಣಿಗೆಯ ಹಿಂದೆ ಹಿಂದೆ ಹೋಗಿ ಓಟು ಕೊಡಿ ಓಟು ಕೊಡಿ ಎಂದು ಕೂಗುತ್ತಾ ಸಂತೋಷಪಟ್ಟದ್ದೆಷ್ಟೋ ಬಾರಿ. ಅವರು ಹಂಚುವ ರಂಗುರಂಗಿನ ಕರಪತ್ರಗಳನ್ನೆಲ್ಲಾ ನಾವು ಕಲೆ ಹಾಕಿ, ಜೊತೆಯ ಮಕ್ಕ ಳೊಡನೆ ಪೈಪೋಟಿ ಬೇರೆ. ಚುನಾವಣಾ ದಿನವಂತೂ ರಜೆಯ ಮಜಾ ಬೇರೆ, ನಮ್ಮ ಶಾಲೆಯೇ ಚುನಾವಣಾ ಕೇಂದ್ರ. ಅಂದೆಲ್ಲಾ ಅಲ್ಲೇ ಠಿಕಾಣಿ. ಏನೋ ಸಂಭ್ರಮ, ಉಲ್ಲಾಸ. ಈಚಿನ ಚುನಾವಣೆಯಲ್ಲಿ ವಾಡಿಕೆಯಂತೆ ಮೆರವಣಿಗೆ ಸಾಗುತ್ತಿತ್ತು. ನನ್ನ ಮಕ್ಕಳು ಹೊರಕ್ಕೂ ಬರದೆ ತಮ್ಮ ಕಾರ್ಯ ನಡೆಸಿದ್ದರು. "ಚುನಾವಣೆ ಏನು ಅಪರೂಪ್ವೇ? ವರ್ಷಕ್ಕೊಂದು ಬಾರಿ ಯಾವುದಾದ್ರೂ ನಡೀತಾನೇ ಇರತ್ತೆ. ಅದನ್ನೇನು ನೋಡೋದು ಬಿಡು" ಎಂದವು.

ಇಷ್ಟೆಲ್ಲಾ ಪೀಠಿಕೆ ಯಾಕೆ ಹೇಳೋಕ್ಕೆ ಬಂದೆ ಅಂದ್ರೆ ಮೊನ್ನೆ ನಮ್ಮ ರಾಘು ಬಂದು ಬಾಂಬ್ ಒಂದನ್ನು ಸಿಡಿಸಿದ. ಛೆ... ಛೆ... ತಪ್ಪು ತಿಳೀಬೇಡಿ. ದೇವ್ರಾಣೆಗೂ

ಅವನಿಗೂ ಎಲ್.ಟಿ.ಟಿ.ಇ., ಪಂಜಾಬ್ ಅಥವಾ ಕಾಶ್ಮೀರದ ಉಗ್ರವಾದಿಗಳಿಗೂ ಯಾವ ಸಂಬಂಧವೂ ಇಲ್ಲ. ಆತ ಸಿಡಿಸಿದ್ದು ಕೇವಲ ಸುದ್ದಿ ಬಾಂಬ್ ಒಂದನ್ನು.

"ನಾನೊಂದು ಹೊಸ ರಾಜಕೀಯ ಪಕ್ಷ ಕಟ್ಕೊಳ್ತಾ ಇದ್ದೇನೆ." ರಾಘೂಗೆ ರಾಜಕೀಯ ಕ್ಷೇತ್ರದ ಅನುಭವವೇ ಇಲ್ಲ ಅಂತ ಹೇಳೋ ಹಾಗಿಲ್ಲ. ಧನಬಲ, (ಗೂಂಡಾ ! ? !) ಜನಬಲ, ಜಾತಿಬಲ ಯಾವುದೂ ಇಲ್ಲದೇನೇ ಚುನಾವಣೆಗೆ ನಿಲ್ಲುವ ಸಾಹಸ ಒಮ್ಮೆ ಮಾಡಿದ್ದ. ನಾನೂ ಆಗ ಪರಿಚಯದವರಲ್ಲೆಲ್ಲಾ ಹೋಗಿ ಹಲ್ಲು ಪ್ರದರ್ಶಿಸಿ ಮತ ಹಾಕಲು ವಿನಂತಿ ಮಾಡಿಕೊಂಡಿದ್ದೆ. ಫಲಿತಾಂಶ ಹೊರ ಬಿದ್ದಾಗ ತಿಳಿದದ್ದು ರಾಘುವಿಗೆ ಬಿದ್ದ ಮತ ಕೇವಲ ಎಂಟು ಎಂದು. ಆ ಎಂಟು ಮಂದಿಯಲ್ಲಿ ಒಬ್ಬ ಸ್ವತಃ ರಾಘು, ಅವನ ಹೆಂಡತಿ. ಆವನ ವಯಸ್ಸಾದ ತಂದೆ ತಾಯಿಯರು ಹಾಗೂ ನಮ್ಮ ಮನೆಯ ನಾಲ್ಕು ವೋಟುದಾರರು. ಠೇವಣಿ ಶುದ್ಧಾಂಗವಾಗಿ ಕಳೆದುಕೊಂಡ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲವಲ್ಲ ! ಕೆಲವು ಮಂದಿ ಜೀವನದಿಂದ ಪಾಠ ಕಲಿಯುವುದೇ ಇಲ್ಲ.

"ನಿನ್ನ ಈ ಹೊಸ ಪಕ್ಷಕ್ಕೆ ಯಾರು ಸೇರ್ತಾರೇಂತಿ ?"

"ಸೇರ್ದೆ ಏನು ? ಎಲ್ಲಾ ಪಕ್ಷಗಳಲ್ಲೂ ಭಿನ್ನಮತೀಯರಿದ್ದೇ ಇರ್ತಾರೆ. ನನ್ನ ಪಕ್ಷದಲ್ಲಿ ಆರಿಸಿ ಬಂದ ಶಾಸಕರಿಗೆಲ್ಲಾ ಸಚಿವ ಪದವಿಗಟ್ಟಿ ಅಂತ ಹೇಳಿದ್ರೆ ಓಡಿ ಬರ್ತಾರೆ. ಎಲ್ಲರನ್ನೂ ಸಂಘಟಿಸಿ ನನ್ನ ಪಕ್ಷ ಕಟ್ತೀನಿ."

ಆತ್ಮ ವಿಶ್ವಾಸಕ್ಕೆ ಇನ್ನೊಂದು ಹೆಸರೇ ರಾಘು ಎಂದು. ಆವನ ಉತ್ಸಾಹಕ್ಕೆ ಐಸ್ ನೀರು ಸಿಂಪಡಿಸಲು ಮನಸ್ಸು ಬರಲಿಲ್ಲ. ಆದರೂ ಹಿತೈಷಿಯಾಗಿ ಒಂದು ಸಂದೇಹವನ್ನು ಮುಂದಿಟ್ಟೆ.

"ನಿನ್ನ ಹೊಸ ಪಕ್ಷಕ್ಕೆ ಧನಬಲ, ಜನಬಲ ಹೇಗೆ ಸಂಪಾದಿಸುತ್ತಿ ?"

"ಆಷ್ಟೆಲ್ಲಾ ಯೋಚಿಸದೇನೇ ಈ ಪ್ರಯತ್ನಕ್ಕೆ ಕೈ ಹಾಕ್ತೀನಾ ? ನನ್ನ ಪಕ್ಷದ ಪ್ರಣಾಲಿಕೆ ಬಹಳ ಯೋಚಿಸಿ ರಚಿಸಿದ್ದೇನೆ. ಆದನ್ನು ನೋಡಿದೊಡನೆ ಸಮಾಜದ ಎಲ್ಲಾ ವರ್ಗದ ಜನರೂ ಒದ್ದುಕೊಂಡು ಬಂದು ಬೆಂಬಲ ನೀಡ್ತಾರೆ. ಹಣದ ಹೊಳೆ ಪ್ರವಾಹದಲ್ಲಿರೋ ಬ್ರಹ್ಮಪುತ್ರಾವಿನಂತೆ ಹರಿದು ಬರತ್ತೆ" ಕಾಳಿದಾಸನಂತೆ

ಉಪಮೆ ಬೇರೆ ನೀಡಿದ. ತನ್ನ ತೂಗು ಚೀಲದಿಂದ ನೂರತೊಂಬತ್ತೆರಡು ಪೇಜಿನ ನೋಟು ಬುಕ್ಕು ಕೈಗಿತ್ತ. ಮೊದಲ ಪುಟದ ನಾಲ್ಕೂ ಮೂಲೆಯಲ್ಲಿ ಅರಿಶಿಣ ಮಿನುಗುತ್ತಿತ್ತು. ನಡುವೆ ಶ್ರೀ ಗಣೇಶಾಯ ನಮಃ ಎಂದು ಮುತ್ತಿನಕ್ಷರದಲ್ಲಿ ಬರೆದಿದ್ದ. ಎರಡನೆಯ ಪುಟದಿಂದ ಈ ದೇಶದ ಪ್ರಜೆಗಳಿಗೆ ದೀರ್ಘ ಪತ್ರವಿತ್ತು. ಅದರ ಸಾರಾಂಶ ಹೀಗಿತ್ತು.

ಭರತ ಖಂಡವೆಂಬೋ ಪುಣ್ಯ ಭೂಮಿಯ ವೋಟುದಾರರೇ. ನಮ್ಮ ಪಕ್ಷಕ್ಕೆ ನೀವು ನಿಮ್ಮ ಅಮೂಲ್ಯ ಮತ ನೀಡಿದ್ದೇ ಆದರೆ ಈ ದೇಶವನ್ನು, ನಾಡನ್ನು, ಸಮಾಜವನ್ನು, ನಿಮ್ಮನ್ನು ಮತ್ತು ನಮ್ಮನ್ನು ಅತ್ಯುನ್ನತ ಸ್ಥಾನಕ್ಕೆ ತರುವ ಆಶ್ವಾಸನೆ ನೀಡುತ್ತೇವೆ. ಅದರಂತೆ ಈ ಕೆಳಕಂಡ ಆಶ್ವಾಸನೆ ನೀಡಬಯಸುತ್ತೇವೆ.

ಅ) ಶಾಲಾ ಕಾಲೇಜುಗಳಲ್ಲಿ ನಡೆಯುವ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಕಾಪಿ ಮಾಡುವುದು ಅವರ ಜನ್ಮಸಿದ್ಧ ಹಕ್ಕು ಎಂದು ಘೋಷಿಸಿ ಅಂತಹ ಮಸೂದೆಯೊಂದನ್ನು ತರಬಯಸುತ್ತೇವೆ. ಪರೀಕ್ಷೆಗಳಲ್ಲಿ ಪ್ರಶ್ನೆ ಪತ್ರಿಕೆಯ ಜೊತೆಗೆ ಸಂಬಂಧ ಪಟ್ಟ ಪಠ್ಯ ಪುಸ್ತಕವನ್ನೂ ಹಂಚಲಾಗುವುದು. ಇಷ್ಟಾಗಿಯೂ ನಪಾಸಾಗುವ ಬೃಹಸ್ಪತಿಗಳನ್ನು ಮಾನವೀಯತೆಯ ದೃಷ್ಟಿಯಿಂದ ಹೆಚ್ಚು ಅಂಕ ನೀಡಿ ಉತ್ತೀರ್ಣಗೊಳಿಸಲಾಗುವುದು.

ಆ) ಸರ್ಕಾರಿ ಉದ್ಯೋಗಾವಕಾಶಕ್ಕಾಗಿ ಈ ಕೆಳಕಂಡಂತೆ ಮೀಸಲಾತಿಯ ನಿರ್ಣಯ ಮಾಡಲಾಗುವುದು.

ಪರಿಶಿಷ್ಟ ಜಾತಿ ಹಾಗೂ ವರ್ಗದವರು	—	70%
ಹಿಂದುಳಿದವರು	—	45%
ಇತರೇ ಹಿಂದುಳಿದವರು	—	35%
ಅಲ್ಪ ಸಂಖ್ಯಾತರು	—	30%
ಮಹಿಳೆಯರು	—	25%
ಅಂಗವಿಕಲರು	—	10%
* ಹಿಂದುಳಿಯದವರು	—	0%

ವಿ.ಸೂ.: ಈ ಪಟ್ಟಿ ಓದುವಾಗ್ಗೆ ಸಾಮಾನ್ಯ ಅಂಕಗಣಿತ ಜ್ಞಾನವನ್ನು ಮರೆಯಿರಿ.
ಧನ್ಯವಾದಗಳು.

ವಿ ಸೂ. : ಇವರನ್ನು ಹೊರ ರಾಷ್ಟ್ರಗಳಿಗೆ ವಲಸೆ ಹೋಗಲು ಪ್ರೋತ್ಸಾಹಿಸಲಾಗುವುದು.

ಇ) ಲಂಚ ನಿರ್ಮೂಲನೆಯ ಅಂಗವಾಗಿ ಲಂಚ ಸ್ವೀಕಾರ ಕಾನೂನು ಬದ್ಧಗೊಳಿಸುತ್ತೇವೆ. ಲಂಚ ಸ್ವೀಕಾರದಲ್ಲಿ ಏಕ ಪ್ರಕಾರತೆ ತರುವ ದೃಷ್ಟಿಯಿಂದ ಪ್ರತಿ ಕಛೇರಿಯ ಮುಂದೆ ಇಂತಿಂತಹ ಕೆಲಸಕ್ಕೆ ಇಷ್ಟಿಷ್ಟು ಎಂದು ನಿಗದಿ ಪಡಿಸಿ ಬರೆಸಲಾಗುವುದು. ಜನತಾ ಜನಾರ್ಧನರು ಅದರಂತೆ ಕಾಣಿಕೆ ಸಲ್ಲಿಸಿ ಕೃತಾರ್ಥರಾಗತಕ್ಕದ್ದು. ಸರ್ಕಾರಿ ನೌಕರರು ಸರ್ಕಾರದಿಂದ ಸ್ವೀಕರಿಸುವ ವೇತನ ಕೇವಲ ಕಛೇರಿಗೆ ಬಂದು ಕೂರುವುದಕ್ಕಷ್ಟೇ. ದೇವರ ಕೆಲಸವಾದ ಸರ್ಕಾರೀ ಕೆಲಸ ಮಾಡಲು ಲಂಚ ಹೆಚ್ಚಿನ ಭತ್ಯ ಎಂದು ಪರಿಗಣಿಸತಕ್ಕದ್ದು.

ಈ) ಈ ಮೇಲಿನ ನಿರ್ಣಯದಿಂದ ಲಂಚ ನಿರ್ಮೂಲನಾ ಖಾತೆಯ ನೌಕರರು ನಿರುದ್ಯೋಗಿಗಳಾಗುವ ಭಯ ಬೇಡ. ಆ ಖಾತೆಯನ್ನೇ ನಿರ್ಮೂಲ ಮಾಡಿ ಬೇರೆ ಬೇರೆ ಖಾತೆಗಳಿಗೆ ನೌಕರರನ್ನು ವರ್ಗೀಕರಿಸಲಾಗುವುದು.

ಉ) ವರದಕ್ಷಿಣೆಯಂತಹ ಸಾಮಾಜಿಕ ಪಿಡುಗನ್ನು ನಾಶಮಾಡಲು ಈ ಕೆಳಕಂಡ ಯೋಜನೆ ತಯಾರಿಸಿದ್ದೇವೆ.

ವರಗಳ ಯೋಗ್ಯತೆ, ವಿದ್ಯಾರ್ಹತೆಯನ್ನು ಲಕ್ಷದಲ್ಲಿರಿಸಿ ಅದಕ್ಕೆ ತಕ್ಕಂತೆ ವರದಕ್ಷಿಣೆಯ ಮೊತ್ತವನ್ನು ನಮ್ಮ ಸರ್ಕಾರವೇ ನಿರ್ಧರಿಸಿ ವಧುವಿನ ತಂದೆ ತಾಯಿಯರ ಸ್ಥಾನದಲ್ಲಿ ನಿಂತು ತಾನೇ ನೀಡಲಿದೆ

ವಿ.ಸೂ. ಗಮನಿಸಿ ಗಮನಿಸಿ ಮನೆಗೆ ಸೊಸೆ ಬಂದ ಮೊದಲೈದು ವರ್ಷಗಳು ರೇಷನ್ ಕಾರ್ಡಿನಲ್ಲಿ ಸೀಮೆಎಣ್ಣೆ ನೀಡಿಕೆ ರದ್ದು ಮಾಡಲಾಗುವುದು.

ಊ) ರೈತರಿಗೆ ಹಿಂದಿನ ಹಾಗೂ ಇನ್ನು ಮುಂದೆ ನೀಡಲಾಗುವ ಸಾಲವೇ ಅಲ್ಲದ ಸಾಲವನ್ನು ಸಂಪೂರ್ಣ ಮನ್ನಾ ಮಾಡಲಿದ್ದೇವೆ.

ಎ) ವ್ಯಾಪಾರಿಗಳು, ಉದ್ಯೋಗ ಪತಿಗಳು ಕೊಡಬೇಕಾದ ಆದಾಯ ತೆರಿಗೆ ಬಾಕಿ ಇದ್ದಲ್ಲಿ ಅದನ್ನೂ ಮನ್ನಾ ಮಾಡಲಾಗುವುದು.

ಏ) ಯಾವುದೇ ಪಕ್ಷ ಅಥವಾ ಸಂಘಕ್ಕೆ ಯಾವುದೇ ಕಾರಣಕ್ಕಾಗಿ ಮುಷ್ಕರ ಹೂಡುವ ಇರಾದೆ ಇದ್ದಲ್ಲಿ ನಮ್ಮ ಸರ್ಕಾರವೇ ಸಂಪೂರ್ಣ ಬಂದ್ ಆಚರಿಸಿ ಅವರ ಪ್ರಯತ್ನವನ್ನು ಸಫಲಗೊಳಿಸುತ್ತೇವೆ.

ಐ) ಈಗಿರುವ ರಜಾದಿನಗಳನ್ನು 20% ಅಧಿಕಗೊಳಿಸುವುದಷ್ಟೇ ಅಲ್ಲದೆ ಕುಟುಂಬ ಕಲ್ಯಾಣಕ್ಕಾಗಿ ಹೆರಿಗೆ ರಜವನ್ನು ಪತಿ, ಪತ್ನಿಯರಿಬ್ಬರಿಗೂ ಮಂಜೂರು ಮಾಡಲಾಗುವುದು. "ಹೇಗಿದೆ ನನ್ನ ಪಕ್ಷದ ಪ್ರಣಾಲಿಕೆ? ರಘುವಿನ ಧ್ವನಿಯಲ್ಲಿ ಹೆಮ್ಮೆ ಇತ್ತು.

"ಬಹಳ ಚನ್ನಾಗೇನೋ ಇದೆ. ನೀನು ಹೇಳಿದಂತೆ ಎಲ್ಲಾ ವರ್ಗದ ಜನರೂ ಒದ್ದುಕೊಂಡು ಬಂದು ಮತ ಹಾಕ್ತಾರೆ. ಆದ್ರೆ ಸಮಾಜದ ಬುದ್ಧಿ ಜೀವಿಗಳು, ಸಾಹಿತಿಗಳು, ಕಲಾವಿದರು ಇವ್ರನ್ನೆಲ್ಲಾ ಪ್ರಣಾಲಿಕೆಯಲ್ಲಿ ಕೈಬಿಟ್ಟಿದ್ದೀಯ ?

"ಮತದಾರರ ಸಂಖ್ಯೆಯಲ್ಲಿ ಅವರಿರುವುದು ಶೇಕಡಾ ಅರ್ಧವೋ ಒಂದೋ. ಅವರು ನಮಗೆ ಮತ ಹಾಕಿದ್ರೂ ಸರಿ ಬಿಟ್ರೂ ಸರಿ. ಫಲಿತಾಂಶದ ಮೇಲೆ ಯಾವ ಪ್ರಭಾವವೂ ಬೀಳದು. ಅವರ ಕೈ ಹಿಡ್ದು ನಾವೇನು ಮಾಡೋಣ?" ಚೀಲದೊಳಕ್ಕೆ ಪುಸ್ತಕ ಇಳಿಬಿಟ್ಟ.

"ನನ್ನ ಪಕ್ಷಕ್ಕೆ ಸೂಕ್ತವಾದ, ಅಪೂರ್ವವಾದ, ಅರ್ಥವತ್ತಾದ ಹೆಸರು ಹೇಳು ನೋಡೋಣ." ಸವಾಲೆಸೆದ ಅವನು ಹೆಸರಿಸಿದ ಎಲ್ಲಾ ವಿಶೇಷಣಕ್ಕೂ ಹೊಂದುವ ಒಂದೇ ಹೆಸರು ತಲೆಗೆ ಹೊಳೆಯಿತು.

"ಜೌ ಜೌ ಪಕ್ಷ" ಅಂತ ಹೆಸರಿಡು."

"ತಥಾಸ್ತು" ಎಂದು ಹೊರನಡೆದ.

ದೇಶದ ಭವಿಷ್ಯದ ಬಗ್ಗೆ ಚಿಂತಿಸುತ್ತಾ ಕುಳಿತೆ. ಟಿ.ವಿ.ಯಲ್ಲಿ ಹರಿಕಥೆ ನಡೆಯುತ್ತಿತ್ತು. ದಾಸರು ಕಥೆ ಮುಗಿಸುತ್ತಾ "ಶ್ರೀಮದ್ರಮಾರಮಣ ಗೋವಿಂದಾ ಗೋವಿಂದಾ" ಎಂದು ಉಚ್ಚಕಂಠದಲ್ಲಿ ಕೂಗಿದರು.

ವರ್ಚ್ಯುಯಲ್ ರಿಯಾಲಿಟಿ

ಶಿವು

ಸಂಕ್ರಾಂತಿ ಹಬ್ಬದ ಮಾರನೆಯ ಸಂಜೆ. ನಮ್ಮ ಗೆಳೆಯರ ಗುಂಪಿಗೆ ಹಬ್ಬದ ಸಂಜೆ ಕ್ಲಬ್ಬಿಗೆ ಬರೋದಕ್ಕೆ ಏನೋ ಒಂದು ತರಹ ಪಾಪಪ್ರಜ್ಞೆ. ಹಾಗಾಗಿ ಮಾರನೆಯ ಸಂಜೆ ಹಸಿದ ಹುಲಿಗಳ ತರಹ. ಅಲ್ಲ, ಅಲ್ಲ, ಬಾಯಾರಿದ ಬೈಸನ್‌ಗಳ ತರಹ ಬಂದ್ಬಿಡ್ತಾರೆ ಹಿಂಡು ಹಿಂಡಾಗಿ ಹೀರೋಕ್ಕೆ. ಅಂದು ನಾನು ಹೋಗುವ ಹೊತ್ತಿಗಾಗಲೇ, ಪ್ರತಾಪ. ಬಷೀರ, ದೇವೇಂದ್ರ, ರಾಜು ಎಲ್ಲಾ ಬಂದು ಕೂತು ಪಾನಕ ಸೇವೆ ನಡೆಸಿದ್ದರು. ಮಾತು ಕತೆ ಎಂದಿನಂತೆ ಭರದಿಂದ ಸಾಗಿತ್ತು,

"ಅದೇನ್ಬಂದಿದೆಯೋ, ಈ ಬಿ.ಬಿ.ಸಿ. ಜನಗಳ್ಗೆ. ಸದಾ ಬಾಸ್ನಿಯಾ. ಬಾಸ್ನಿಯಾ ಅಂತ ಬಡ್ಕೋತಾರೆ. ಬಾಸ್ನಿಯಾ ಬಿಟ್ರೆ ಏನೂ ಸುದ್ದೀನೇ ಇಲ್ವೆ ಈ ಪ್ರಪಂಚದಲ್ಲಿ ಅಲ್ಲೀ ಗಲಾಟೆ ನೋಡಿದ್ರೆ ಕೈಲಾಸಂ ಹೇಳಿದಹಾಗೆ 'ನಮ್ಮೂರೇ ವಾಶಿ' ಅನ್ನುತ್ತೆ" ಪ್ರತಾಪ್ ಹೇಳಿದ.

"ಅಯ್ಯೋ ಪ್ರತಾಪ. ಅವರು ಹೇಳಿದ್ದನ್ನೆಲ್ಲಾ ನಂಬ್ತೀಯಲ್ಲಾ. ಅದೆಲ್ಲಾ ಬರೀ ಬಿಳೀ ತೊಗಲಿನೋರ ಪ್ರಚಾರ ಅಷ್ಟೇ. ಬಾಸ್ನಿಯಾದ ಬಿಳೀ ಕಿರಿಸ್ತಾನರಿಗೆ ಏಟು ಬೀಳ್ತಾ ಇದ್ಯಲ್ಲಾ ಅದಕ್ಕೇ ಅಷ್ಟು ಕಣ್ಣೀರು. ಹಿಂದೆ ವಿಯಟ್ನಾಂನಲ್ಲಿ ಕಂದು ಬಣ್ಣದೋರ್ನ ನರಮೇಧ ಮಾಡಿದ್ರಲ್ಲಾ ಅಮೆರಿಕಾದೋರು. ಆಗ ಎಲ್ಲಿ ಹೋಗಿತ್ತೋ ಇವರ ಅನುಕಂಪಾ ಎಲ್ಲಾ?" ಬಷೀರ ಆವೇಶದಿಂದ ಪ್ರತಿಕ್ರಿಯಿಸಿದ

"ಬಾಸ್ನಿಯಾ ಹಾಗಿರ್ಲಿ, ಇಲ್ಲಿ ನಮ್ಮ ಕರ್ನಾಟಕದಲ್ಲಿ ನಮ್ಮ ಬಾಸ್‌ನ ನೀಯಾ ಇನ್ನೊತ್ತರಾ ಅಂತ ರಾವ್ ಸಾಹೇಬರು ಕೇಳುಕ್ಕೆ ಶುರುಮಾಡಿ ಸಿ.ಎಂ.ನ ಪೇಚಿಗೆ ಸಿಕ್ಕಿಸ್ತಾ ಇದಾರಲ್ಲಾ ಇದೆಂಥಾ ನಾಚಿಗ್ಗೇಡು ಅಂತೀನಿ. ಭಿನ್ನ ಮತೀಯರು ಅಂತಾನೇ ಒಂದು ಪಕ್ಷ ಕಟ್ಟಿದ್ರೆ ನೋಡಪ್ಪ ಸದಾ ಪಾರ್ಟಿ ಟಿಕೆಟ್‌ಗೆ ನೂಕುನುಗ್ಗಲು ಇರುತ್ತೆ" ದೇವೇಂದ್ರ ಕುಹಕ ನುಡಿಯುವ ಹೊತ್ತಿಗೆ ಬಾಲು, ಪ್ರಸಾದ್ ಬಂದು ನಮ್ಮ ಟೇಬಲ್ ಸೇರಿದರು. ಬೇರರ್ ಜೋಸೆಫ್ ಬಂದು, ಎರಡು ರಾಜಾ ಮಸಾಲ ತಟ್ಟೆಗಳನ್ನ ಅವರ ಮುಂದಿಟ್ಟು ಒಂದು ತುಂಬಿದ ಕರಾಫೆಯನ್ನು ಪಕ್ಕಕ್ಕೆ ಜೋಡಿಸಿ, ಹಿಂದಿನ ಕಾಲದ ಋಷ್ಯಾಶ್ರಮಗಳಲ್ಲಿ ವಟುಗಳು ಅತಿಥಿಸತ್ಕಾರ ಮಾಡುತ್ತಿರಲಿಲ್ಲವೇ, ಹಾಗೆ ಸತ್ಕಾರಮಾಡಿ ಹೋದ.

"ಎಲ್ಲಿ ಹೋಗಿದ್ಯೋ ಬಾಲು ನಿನ್ನೆ ಸಂಜೆ? ಫೋನ್ ಮಾಡಿದಾಗ ರಿಂಗ್ ಆಗ್ತಾನೇ ಇತ್ತು ನಿಮ್ಮನೇಲಿ. ಯಾರೂ ಎತ್ತಾನೇ ಇರ್ಲಿಲ್ಲ" ರಾಜು ಕೇಳಿದ.

"ನನ್ಹೆಂಡ್ತಿ, ನಾನು ದೇವು ಮನೆಗೆ ಹೋಗಿದ್ವಿ. ಆಯೆಷಾ ಮನೆಗೆ ಹೋಗಿ ಎಳ್ಳು ಕೊಟ್ಟು ಬರೋಣ, ಅವಳಿಗೆ ಈ ಕುಸುರಿ ಕಾಳಿರೋ ಎಳ್ಳು ಅಂದ್ರೆ ಇಷ್ಟ ಅಂತ ಅಮ್ಮಾವ್ರ ಆಜ್ಞೆ. ಶಿರಸಾ ಪಾಲಿಸ್ದೆ" ಬಾಲುಗೆ ನಾಚಿಕೆ ಇದ್ದ ಹಾಗೆ ಕಾಣಿಸಲಿಲ್ಲ.

"ಥಿಂಕ್ ಆಫ್ ದ ಡೆವಿಲ್ ಅಂದಹಾಗೆ ಅಲ್ಲೇ ಹಾಜರ್ ನೋಡು ದೇವು. ಅವನ ಹೆಸರು ಹೇಳ್ತಿದ್ದ ಹಾಗೆ,"

ದೇವು ಸಾವಧಾನವಾಗಿ ಬಂದು ತನ್ನ ಪೇಟೆಂಟ್ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಿದ್ದಂತೆ ಪಟುವಿನ ಅತಿಥಿ ಸತ್ಕಾರ ಪುನಃ ನಡೆಯಿತು.

"ಏನು ಬಹಳ ರಾಜಕೀಯ ಮಾತಾಡ್ತಾ ಇದ್ದ ಹಾಗಿತ್ತು? ಏನು ಸಮಾಚಾರ?" ಅಂತ ದೇವೇಂದ್ರನ್ನ ಕೇಳಿದ.

"ಅದೇ ಹಳೇ ಪುರಾಣ ದೇವು. ಒಬ್ಬ ಮುಖ್ಯಮಂತ್ರಿ ಆಗ್ತಾನೆ. ಇನ್ನೊಬ್ಬನಿಗೆ ಕೂಡ ಅದೇ ಆಸೆ. ಅವನು ಭಿನ್ನಮತೀಯ ಆಗ್ತಾನೆ. ಕೊನೆಗೊಂದುದಿನ ಭಿನ್ನಮತೀಯರ ಕಿರುಕುಳ ತಡೆಯಲಾಗದೆ ಸಿ. ಎಂ. ಜಾಗ ಖಾಲಿ ಮಾಡೋ ಹೊತ್ತಿಗೆ ಭಿನ್ನಮತೀಯ ನಂಬರ್ ಒನ್ ಆ ಜಾಗಾನ ಆಕ್ರಮಿಸಿರ್ತಾನೆ. ಅಷ್ಟೊತ್ತಿಗೆ ಭಿನ್ನಮತೀಯ ನಂಬರ್ ಟೂ ರೆಡಿ. ಈ ಮಾರಾಮಾರೀಲಿ ರಾಜ್ಯದ ಆಡಳಿತದ ಗತಿ ಗೋವಿಂದ. ಪ್ರಜೆಗಳ ಪಾಡು ಡಬ್ಬಲ್ ಗೋವಿಂದ. ಅದನ್ನೇ ಮಾತಾಡ್ತಾ ಇದ್ವಿ"

"ಅಲ್ಲಾದೇವು, ಇದಕ್ಕೆಲ್ಲಾ ಪರಿಹಾರಾನೇ ಇಲ್ವೆ! ಇಪ್ಪತ್ತನೇ ಶತಮಾನ ಮುಗೀತಾ ಬಂತು. ಇಪ್ಪತ್ತೊಂದನೇದು ಶುರು ಆಗೋದ್ರಲ್ಲಿದೆ. ಇಷ್ಟೆಲ್ಲಾ ಅಗಾಧವಾದ ತಾಂತ್ರಿಕ ಪ್ರಗತಿ ಆಗಿದ್ರೂ ಇನ್ನೂ ಇಂಥ ಆದಿ ಮಾನವನ ದ್ವೇಷಾಸೂಯೆಗಳು ನಮ್ಮನ್ನ ಆಳಬೇಕೆ? ಏನಂತೀಯಾ?" ಅಂತ ಕೇಳಿ ದೇವುವಿನ ವಿಲಕ್ಷಣ ವಿಚಾರ ಸರಣಿಗೆ ನಾನೊಂದು ಕಾಲುವೆ ತೋಡಿದೆ.

ದೇವು ಒಂದು ಗುಟುಕು ಬೀರು ಹೀರಿ ಶುರು ಮಾಡಿದ.

"ಇದೆ ಶಿವು, ಖಂಡಿತಾ ಇದೆ. ಅನುಷ್ಠಾನಕ್ಕೆ ತರೋ ಛಾತಿ ಇರ್ಬೇಕು ಅಷ್ಟೇ. ಅಂದ ಹಾಗೆ ದೂರದಿಂದ ನಾನು ಬರ್ತಿದ್ದಾಗ ಯಾರೋ ಬಿ. ಬಿ. ಸಿ. ವಿಷಯ ಮಾತಾಡ್ತಾ ಇದ್ರು, ಯಾರದು ?"

"ಪ್ರತಾಪ, ಯಾಕೋ ದೇವು ಜೆ.ಪಿ.ಸಿ. ತನಿಖೆ ಪ್ರಾರಂಬಿಸ್ದೆ. ನಾನೇ ಬಿ.ಬಿ.ಸಿ.ಲಿ ಬರ್ತಿರೋ ಬಾಸ್ನಿಯಾ ಅನ್ನೋ ಮುಗಿಯದ ಕಥೆ ಬಗ್ಗೆ ಹೇಳ್ತಾ ಇದ್ದೆ" ಅಂದ.

"ನೀನು ಬರೇ ನ್ಯೂಸ್ ಮಾತ್ರಾ ನೋಡ್ತೀಯೋ, ಅಥವಾ ಬೇರೇ ಇನ್ನೇನಾದ್ರೂ ನೋಡೋ ಅಭ್ಯಾಸ ಇದೆಯೋ ?"

"ಯಾವುದರ ಬಗ್ಗೆ ನೀನು ಹೇಳ್ತಿದೀಯ ?"

"ಟುಮಾರೋಸ್ ವರ್ಲ್ಡ್ ಅಂತ ಒಂದು ವಿಜ್ಞಾನದ ಕಾರ್ಯಕ್ರಮ..."

"ಓಹೋಹೋ ನೋಡ್ದೆ ಏನು ? ಒಬ್ಳು ನೀಗ್ರೋ ತರುಣಿ ಜೀನ್ಸ್ ಹಾಕ್ಕೊಂಡು ಬಂದು ಹೋದ್ವಾರ ಪುಟ್ಟ ಪುಟ್ಟ ರೋಬಟ್‌ಗಳು ಇರುವೆಗಳ ತರಹ ಸರಿದಾಡೋದನ್ನ ತೋರಿಸಿದಳಲ್ಲಾ ಅದು ತಾನೇ ನೀ ಹೇಳ್ತಿರೋದು.

"ಪರವಾಗಿಲ್ಲ ಪ್ರತಾಪ ಒಳ್ಳೇ ಅಸೋಸಿಯೇಷನ್ ಆಫ್ ಐಡಿಯಾಸ್. ಒಂದೊಂದು ಕಾರ್ಯಕ್ರಮಕ್ಕೂ ಒಬ್ಬೊಬ್ಬ ತರುಣಿ ಚಹರೆ. ಅದಿರ್ಲಿ, ಆ ವಿಜ್ಞಾನ ಕಾರ್ಯಕ್ರಮದಲ್ಲಿ ಕೆಲವು ತಿಂಗಳ ಹಿಂದೆ ಒಂದು ಹೊಸಾ ಕಂಪ್ಯೂಟರ್ ವ್ಯವಸ್ಥೆ ಬಗ್ಗೆ ಹೇಳ್ತಾ ಇದ್ರು."

"ಏನಂತ ?"

"ಹೇಳ್ತೀನಿ ಕೇಳು. ಆ ವ್ಯವಸ್ಥೆ ಹೆಸ್ರು ವರ್ಚುಯಲ್ ರಿಯಾಲಿಟಿ ಅಂತ. ಅದರಲ್ಲಿ ವೀಕ್ಷಕ ಹೆಲ್ಮೆಟ್ ತರಹ ಒಂದು ಕವಚಾನ ತಲೆಗೆ ಹಾಕ್ಕೊಳ್ತಾನೆ. ಅದರ ಮುಂದೆ ಕಣ್ಣಿನ ಜಾಗದಲ್ಲಿ ಒಂದು ಬೈನಾಕ್ಯುಲರ್ಸ್ ತರಹಾ ಕನ್ನಡಕ, ಕೈಗೆ ಎರಡು ಕೈಚೀಲ. ಹೆಲ್ಮೆಟ್ಟು, ಕೈಚೀಲ ಎಲ್ಲಾನೂ ತಂತಿಗಳ ಮೂಲಕ ಕಂಪ್ಯೂಟರಿಗೆ ಸೇರಿಸುತ್ತಾರೆ. ಕಂಪ್ಯೂಟರ್ ಪ್ರೋಗ್ರಾಂನ ಚಾಲೂ ಮಾಡಿದ ತಕ್ಷಣ, ವೀಕ್ಷಕನ ಕಣ್ಣಮುಂದೆ ಒಂದು ಹೊಸ ಮಾಯಾ ಲೋಕ. ಬರೀ ನೋಟಕ್ಕೆ ಮಾತ್ರಾ ಅಲ್ಲ. ಅಲ್ಲಿರೋ ವಸ್ತುಗಳನ್ನ ಮುಟ್ಟಬಹುದು. ಆ ಲೋಕದಲ್ಲಿ ಓಡಾಡಬಹುದು. ಏನೆಲ್ಲಾ ಮಾಡಬಹುದು. ಒಂದು ಹೊಸ ನೈಜತನ, ವರ್ಚುಯಲ್ ರಿಯಾಲಿಟಿನ ಈ ಕಂಪ್ಯೂಟರ್ ಸೃಷ್ಟಿಸುತ್ತೆ".

"ಅದ್ಸರಿ ದೇವು ಇದಕ್ಕೂ ನಮ್ಮ ಭಿನ್ನಮತೀಯರ ಕಚ್ಚಾಟಕ್ಕೂ ಏನು ಸಂಬಂಧ?"

"ಆ ಕಂಪ್ಯೂಟರ್‌ಗೆ ಎಂಭತ್ತು ಲಕ್ಷ ಅಂತೆ. ಅಂಥಾ ಒಂದು ಎಂಟು ಕಂಪ್ಯೂಟರುಗಳನ್ನ ಕೊಂಡು, ಯಾರ್‍ಯಾರಿಗೆ ಸಿ.ಎಂ. ಆಗಬೇಕು ಅಂತ ಇಷ್ಟ ಇದೆಯೋ ಆ ಭಿನ್ನಮತೀಯ ನಾಯಕರಿಗೆಲ್ಲಾ ಒಂದೊಂದು ಪ್ರೆಸೆಂಟ್ ಕೊಡೋದು. ಎಂಟು ಮುಖ್ಯಮಂತ್ರಿ ಭವನಗಳನ್ನ ಕಲ್ಪಿಸಿ ಅದರಲ್ಲಿ ಈ ಎಂಟು ಆಸಾಮಿಗಳನ್ನೂ ಪ್ರತಿ-ಷ್ಠಾಪಿಸಿಬಿಟ್ರೆ ಸಾಕು ಬೆಳಗಿಂದ ಸಂಜೆವಗೂರ್ ಎಲ್ರೂ ತಮ್ಮ ತಮ್ಮ ಸಿ.ಎಂ. ಲೋಕ ದಲ್ಲೆ ರಾಜರಹಾಗೆ ಮೆರೀಬಹುದು.

""ರಾಜ್ಯದ ನಿಜವಾದ ಆಡಳಿತ ?

"ಅದನ್ನ ರಾಜ್ಯಪಾಲರಿಗೆ ವಹಿಸಿದರೆ ಆಯ್ತಪ್ಪ"

"ಅಥವಾ ರಾಜ್ಯಪಾಲರಿಗೂ ಒಂದು ಹೆಲ್ಮೆಟ್ ದಯಪಾಲಿಸಿ, ರಾಜ್ಯಾಡಳಿತಾನೆಲ್ಲಾ ಐ.ಎ.ಎಸ್. ಅಧಿಕಾರಿಗಳಿಗೇ ಬಿಟ್ರೆ ಇನ್ನೂ ಒಳ್ಳೇದಲ್ವೆ."

"ಇನ್ನೂ ಒಳ್ಳೇ ಐಡಿಯ. ದೇಶದ ಎಲ್ಲ ರಾಜಕಾರಣಿಗಳಿಗೂ ಒಂದೊಂದು ಹೆಲ್ಮೆಟ್. ಹೇಗೂ ಹೆಲ್ಮೆಟ್ ಕಾಯಿದೆ ಈಗಾಗ್ಲೇ ಜಾರೀಲಿದೆ."

"ಸ್ವಲ್ಪ ತಾಳಿ, ಸ್ವಲ್ಪ ತಾಳಿ" ರಾಜು ಕೈ ಎತ್ತಿದ.

"ಏನದು ರಾಜು ?"

"ಒಂದು ಮುಖ್ಯ ವಿಷಯ ಮರೆತಿದ್ವಿ. ಬಿ.ಬಿ.ಸಿ. ನೋರು ತೋರಿಸಿದ್ದು, ಎಂಭತ್ತು ಲಕ್ಷ ಖರ್ಚುಮಾಡಿ, ಒಬ್ಬ ವ್ಯಕ್ತಿ ವರ್ಚುಯಲ್ ರಿಯಾಲಿಟಿ ಅನುಭವಿಸೋ ಕಂಪ್ಯೂಟರ್ ವ್ಯವಸ್ಥೆ. ನಮ್ಮ ರಾಜಕಾರಣಿಗಳು ಒಂದು ಹೆಜ್ಜೆ ಮುಂದು."

"ಹೇಗೆ ?"

"ಚುನಾವಣೆ ಸಮಯದಲ್ಲಿ, ಲಕ್ಷಾಂತರ ಜನಕ್ಕೆ ಒಮ್ಮೆಲೇ ವರ್ಚುಯಲ್ ರಿಯಾಲಿಟಿ ಮಾಯಾಲೋಕನ ಕಲ್ಪಿಸಿ ಕಣ್ಣಮುಂದೆ ಹಿಡಿದು ಓಟು ಗಿಟ್ಟಿಸ್ತಾರೆ. ಇಂಥವರಿಗೆ ಹೆಲ್ಮೆಟ್ ಬೇರೆ ದಂಡ".

"ಭಲೆ ರಾಜು, ಒಳ್ಳೇ ಪಾಯಿಂಟ್ ಹಿಡಿದೆ. ಹ್ಯಾಟ್ಸ್ ಆಫ್" ಅಂದ ದೇವು ತನ್ನ ಬೋಳು ತಲೆ ಸವರ್ಕ್ಕೋತಾ. ಬಹಳ ಸ್ಪೋರ್ಟಿವ್ ಈ ಸಿಂಧಿ.

ಅಣುಕು ಕವನಗಳು

ಕಳೆದ ತಿಂಗಳ ಅಪರಂಜಿಯಲ್ಲಿ ಅಣುಕು ಕವನ ರಚಿಸಲು ನಾವು ನೀಡಿದ್ದ ಆಹ್ವಾನವನ್ನು ಇಬ್ಬರು ಉಸ್ತಾದರು ಅಂಗೀಕರಿಸಿದ್ದಾರೆ. ಮಾನ್ಯ ಎಂ.ಟಿ. ಉಪಾಧ್ಯೆರವರು ಶರಷಟ್ಪದಿಯಲ್ಲಿ ಕವನ ರಚನೆ ಮಾಡಿದ್ದಾರೆ. ವಿಕಟಕವಿಯುವರು ಯೆಂಡ್ಕುಡ್ಕ ರತ್ನನ ಶೈಲಿಯನ್ನು ಅನುಸರಿಸಿದ್ದಾರೆ. ಇವರಿಬ್ಬರಿಗೂ ನಮ್ಮ ಗರಡಿಯ ಸೇವಂತಿಗೆ ಹಾರ. ಇಂತಹ ಉಸ್ತಾದರ ಬಳಗ ಬೆಳೆಯಲಿ.

ನಂ ಅಟ್ಟಿ ಐದ
(ಯೆಂಡ್ಕುಡ್ಕ ರತ್ನ ಪದ ಯೋಳ್ದಂಗೆ)

ವಿಕಟಕವಿ

ನಂ ಅಟ್ಟೀಲೆ ಒಂದ್ ಪುಟ್‌ಮಗ ಐತೆ
ಸದಾ ಎತ್ಕೋ ನನ್ ಅಂತೈತೆ
ಇಲ್ಕಣೋ ಅಂತೇನಾದ್ರು ಅಂದ್ರೆ,
ಭಾರೀ ಕ್ವಾಪ ಬಂದ್ಬಿಡ್ತೈತೆ! —೧

ಸೂರ್ ಆರೋ ಅಂಗ್ ಕಿರಚ್ಕೋತ
ರೋಸ್ದಿಂದ್ ಮಗ ಕೂಗಾಡ್ತೈತೆ
ಮೈ ಕೈಯೆಲ್ಲ ಪರಚ್ಕೋತ
ನೆಲದ್ಮೇಕೇ ಉರ್‌ಳಾಡ್ತೈತೆ! —೨

ಕೈ ಮೈಯೆಲ್ಲ ಪರಚ್ಕೋತ
ಜೋರಾಗಳ್ತಾ ಕರೆಯೋ ಐದನ್
ಎರಡೂ ಕಣ್ಣಲ್ ಅರಿಯೋ ಕಂಬ್ನಿ
ತಾಜಾ ಮುತ್ನಂತ್ ಕಾಣ್ತೈತೆ! —೩

ಮಗ ಅಳೋದ್ ಕಂಡ್ ಕೂಡ್ಲೆ
ಅವನಮ್ಮ ಬಿರ್ರನ್ ಓಡ್ಬರ್ತಾಳೆ
ಅವಳೂ ಅಳ್ತ, ಐದನ್ನಾಬಿಚ್ಕೊಂಡ್
ಮುತ್ತು ಕೊಡ್ತ ಸಂತೈಸ್ತಾಳೆ! —೪

ಐದ ಇಷ್ಟೊತ್ ಅಟ ಇಡ್ದಿದ್
ಸಾರ್ಥ ಆಯ್ತು!
ಏತಕ್ ಈ ಪಾಟಿ ಅತ್ತ ಅಂತ
ಈಗರ್ಥ ಆಯ್ತು!! —೫

ನಮ್ಮ ಮನೆಯ ಸಣ್ಣ ಪಾಪ
(ಶರಷಟ್ಪದಿ)

ಎಂ.ಟಿ. ಉಪಾಧ್ಯೆ

ನಮ್ಮಯ ಮನೆಯಲಿ
ಸುಮ್ಮನೆ ಅಳುತಿಹ
ಗುಮ್ಮನ ತಮ್ಮನು ಒಂದಿಹುದು.
ತಮ್ಮಯ ಕೆಲಸದೆ
ಅಮ್ಮನು ಎತ್ತದೆ
ಸುಮ್ಮನೆ ಬಿಟ್ಟರೆ ರೇಗುವುದು.

ಅಳುತಿಹಪಾಪನ
ಸುಳಿವನು ತಿಳಿಯದೆ
ಗಳಗಳ ಅಮ್ಮನು ಅಳುತಿಹಳು.
ಕಳವಳ ಪಡುತಿಹ
ಎಳೆಯನ ಕಂಬನಿ
ತೊಳೆಯುತ ಮುತ್ತನು –
ಕೊಡುತಿಹಳು.

ಸಿಟ್ಟಿನ ಭರದಲಿ
ಚಿಟ್ಟನೆ ಚೀರುತ
ತಟ್ಟನೆ ತನ್ನನು ಪರಚುವುದು.
ಕಟ್ಟಿದ ನೀರನು
ಬಿಟ್ಟಿಹ ರಭಸದಿ
ಪುಟ್ಟನ ಕಣ್ಣಲಿ ಮುತ್ತುದುರಿ.

ನಡೆಯದ ಪಂಥಕೆ
ಹಿಡಿದಿಹ ಹಟವದು
ಪಡೆಯಲು ಮುತ್ತನು ಸಾರ್ಥಕವು
ಹಡೆದಿಹ ತಾಯಿಯು
ಮಡಿಲಿನ ಸುಖವನು
ಕಡೆಗೂ ಪಡೆದುದು ತಿಳಿದಾಯ್ತು.

ಓದುಗರ ಪ್ರತಿಕ್ರಿಯೆ

ಅಪರಂಜಿ ಓದುಗರ ಅಗತ್ಯಗಳಿಗೆ ಹತ್ತಿರದಿಂದ ಸ್ಪಂದಿಸಬೇಕೆಂದು ನಮ್ಮ ಆಶಯ. ಅಪರಂಜಿಯ ತಿರುಳಿನ ಬಗ್ಗೆ ಬದಲಾವಣೆಯ ಸಲಹೆಗಳೇನಾದರೂ ಇದ್ದರೆ, ಕೆಲವು ಲೇಖಕರ ಬರಹಗಳನ್ನು ನೀವು ಮೆಚ್ಚಿದ್ದರೆ, ಖಂಡಿತಾ ನಮಗೆ ಬರೆದು ತಿಳಿಸಿ. ನಿಮ್ಮ ಪ್ರಾಮಾಣಿಕ ಪ್ರತಿಕ್ರಿಯೆ ನಮ್ಮ ಎಲ್ಲಾ ಬರಹಗಾರರಿಗೆ ಅತ್ಯಂತ ಉಪಯುಕ್ತ. ಈಗಾಗಲೇ ಹೊಸವರ್ಷ ಪ್ರಾರಂಭವಾಗಿದೆ. ಬರಲಿರುವ ಯುಗಾದಿಯೂ ಸಹ ಇನ್ನೊಂದು ಹೊಸವರ್ಷದ ನಾಂದಿ. ಈಗಲೇ ನಮ್ಮೊಂದಿಗೆ ಸಂಪರ್ಕಿಸುವ ಪ್ರತಿಜ್ಞೆ ಮಾಡಿ. ಓದುಗರ ಅಚ್ಚು ಮೆಚ್ಚಿನ ಪತ್ರಿಕೆಯಾಗಬೇಕೆಂದು ಅಪರಂಜಿಯ ಆಶೆ. ಈ ಆಶೆ ಕಾರ್ಯಗತವಾಗಲು ನಿಮ್ಮೆಲ್ಲರ ಸಹಕಾರ ಅತ್ಯಗತ್ಯ

ಶಿವಕುಮಾರ್

Printed by V.R. NATH for the Publisher M. SHIVAKUMAR, Published and owned by M. SHIVA KUMAR, 36, 6th Main Road, Malleswaram, Bangalore-560 003. Printed at IMPRESSIONS, 404, Sampige Road, Malleswaram, Bangalore-560 003. Editor : M. SHIVAKUMAR.